137

# ಮೈಸೂರ ಗೆಜೆಟ್.

ನಂ. 24 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1889

ಬೆಂಗಳೂರು, ಶನಿವಾರ, ಜೂನ್ ತಾ|| 15, ಸನ್ 1889.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ--ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ--ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂವೆಟ್ಯೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್ಲಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ಸ್ ಜಡ್ಜ್‌ರು, ಡಿ|| ಡೆಪ್ಯುಟಿ ಕವ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟ್‌ರು, ಫಾರೆಸ್ಟ್ರು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ--ಶ್ರೀಮಂ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು--ಇಲ್ಲ.

4ನೇ ಭಾಗ--ಸರ್ಕಾರೀ ಕಾಗದ ಪತ್ರಗಳು--ಇಲ್ಲ.

## 1ನೇ ಭಾಗ.

### ಶ್ರೀಮಂಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

### ಜನರಲ್.

### ಇಸ್ತಿಹಾರ್‌ನಾಮೆ.

ತಾರೀಖು 9ನೇ ಮೇ 1889.

ನಂ. 31.—ಶ್ರೀಮಂಮಹಾರಾಜಾ ಸರ್ಕಾರದವರು 1885ನೇ ಇಸವಿ IIIನೇ ನಂಬರ್ ರೆಗ್ಯುಲೇಷನ್ನಿಂದ ಮೈಸೂರು ದೇಶಕ್ಕೆ ಜಾರಿಗೆ ತರಲ್ಪಟ್ಟ 1881ನೇ ಇಸವಿ XXIIನೇ ನಂಬರ್ ಡಿಕ್ಸೈಸ್ ಆಕ್ಟಿನ 55ನೇ ಸೆಕ್ಷನಿನಿಂದ ಅವರಿಗೆ ಉಂಟುಮಾಡಲ್ಪಟ್ಟ ಅಧಿಕಾರಗಳ ದೆಸೆಯಿಂದ "ಪರಾಯಿದೇಶದ ಸಾರಾಯಿ" ಮತ್ತು "ಪರಾಯಿದೇಶದ ಉಕ್ಕಿದ ಸಾರಾಯಿ" ಯ (ಬಿಲ್ಲರೆ ಯಾ ಒಟ್ಟು) ಮೂರಾಟದ ಬಗ್ಗೆ ಕೊಡಲ್ಪಡುವ ಲೈಸೆನ್ಸುಗಳಿಗೆ ಸಂಬಂಧಪಟ್ಟ ಇದರಡಿಕಂಡ ರೂಲ್ಸುಯಾನೆ ನಿಬಂಧನೆಗಳನ್ನು ಉಂಟು ಮಾಜುತ್ತಾರೆ.—

ರೂಲ್ 1.—3ನೇ ಸೆಕ್ಷನ್ ಅನುಸರಿಸಿ ಮತ್ತು ಸದರೀ ಆಕ್ಟಿನ ಕೆಲಸಗಳಿಗೋಸ್ಕರ, ಶ್ರೀಮಂ ಮಹಾರಾಜಾ ಸರ್ಕಾರದವರು ನಿಯಮಿಸುವದೇನಂದರೆ:—

ಅರ್ಥ ವಿವರಣೆ.

(a) "ಪರಾಯಿದೇಶದ ಸಾರಾಯಿ" ಮತ್ತು "ಪರಾಯಿದೇಶದ ಉಕ್ಕಿದಸಾರಾಯಿ" ಅಂದರೆ ಯೂರೊಪ್, ಅಮೆರಿಕಾ ಯಾ ಆಸ್ಟ್ರೇಲಿಯಾದಲ್ಲಿನ ಯಾವ ಸ್ಥಳದಲ್ಲಾಗಲೀ ತಯಾರ್ ಮಾಡಲ್ಪಟ್ಟು, ಶ್ರೀಮಂ ಮಹಾರಾಜಾ ಸರ್ಕಾರದವರಿಂದ ಮಂಜೂರ್ಮಾಡಲ್ಪಟ್ಟಂಥಾ ಗೊತ್ತಾದ ಗುಣಳುಳ್ಳದ್ದಾಗಿ ಮೈಸೂರು ದೇಶಕ್ಕೆ ಆಮದ್ ಮಾಡಲ್ಪಟ್ಟ ಅಂಥಾ "ಸಾರಾಯಿ" ಯಾ "ಉಕ್ಕಿದ ಸಾರಾಯಿ" ಯಂದು ಅರ್ಥವಾಗತಕ್ಕದ್ದು.

(b) (ಜಾವಾ, ಸಿಲೋ೯, ಜಿಬೆಲ್ಕಾ ಮತ್ತು ಇಂಡಿಯಾ ದೇಶದಲ್ಲಿನ ಯಾವ ಸ್ಥಳದಲ್ಲೇಯಾಗಲಿ ತಯಾರ್ಮಾಡಲ್ಪಟ್ಟ) ತಮಾಂ ಇತರ ಸಾರಾಯಿ ಮತ್ತು ಉಕ್ಕಿದ ಸಾರಾಯಿಯು "ಕಂತ್ರಿ ಸಾರಾಯಿ" ಯಾ "ಕಂತ್ರಿ ಉಕ್ಕಿದ ಸಾರಾಯಿ" ಯಂಬದಾಗಿ ಸಂದರ್ಭಾನುಸಾರ ಎಣಿಸಲ್ಪಡತಕ್ಕದ್ದು.

ರೂಲ್ II.—(a) ಪರಾಯಿ ದೇಶದ ಸಾರಾಯಿ ಮತ್ತು ಪರಾಯಿ ದೇಶದ ಉಕ್ಕಿದ ಸಾರಾಯಿ ಯಿವುಗಳ ಮೇಲೆ ಶ್ರೀಮ೯ ಮಹಾರಾಜರವರ ಸರ್ಕಾರಕ್ಕೆ ಯಾವ ಅಬ್ಕಾರಿ ತೀರ್ವೆಯೂ ತೆರಬೇಕಾರ್ದಿಲ್ಲವು; ಮತ್ತು— ತೀರ್ವೆ.

(b) ಪರಾಯಿ ಕಂತ್ರಿ ಸಾರಾಯಿ ಮತ್ತು ಕಂತ್ರಿ ಉಕ್ಕಿದ ಸಾರಾಯಿ ಯಿವುಗಳಮೇಲೆ ಸದರೀ ಸರ್ಕಾರಕ್ಕೆ ಅಬ್ಕಾರಿ ತೀರ್ವೆಯು ಪಾವತಿ ಮಾಡಲ್ಪಡಬೇಕು, ಮತ್ತು ಅಂಥಾ ಕಂತ್ರಿ ಸಾರಾಯಿ.ಯಾ ಕಂತ್ರಿ ಉಕ್ಕಿದ ಸಾರಾಯಿಯು ಅಂಥಾ ಅಬ್ಕಾರಿ ತೀರ್ವೆ ಪಾವತಿ ಮಾಡಲ್ಪಡನೆಯೇ ಮೈಸೂರು ದೇಶಕ್ಕೆ ಆಮದ್ ಮಾಡಲ್ಪಡಕೂಡದು.

ರೂಲ್ III.—ಪರಾಯಿದೇಶದ ಸಾರಾಯಿ ಅಥವಾ ಪರಾಯಿದೇಶದ ಉಕ್ಕಿದ ಸಾರಾಯಿ ಯಾ ಈ ವೆರಡರ ಬಿಕರಿಬಗ್ಯಾಗಿ ಲೈಸೆನ್ಸುಗಳು ಆಯಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಿಂದ ಕೊಡಲ್ಪಡತಕ್ಕದ್ದು; ಮತ್ತು ಆಂಥಾ ಪ್ರತಿ ಲೈಸೆನ್ಸೂ ಅದು ಕೊಡಲ್ಪಟ್ಟ ಸರ್ಕಾರ ಸಾಲಿನ ಮಾರ್ಚಿ 31ನೇ ತಾರೀಖಿನವರಿಗೆ ವಾಯಿದೆ ಉಂಟಾಗಿ ಯಿರತಕ್ಕದ್ದು.

ಲೈಸೆನ್ಸುಗಳು ಯಾರಿಂದ ಮತ್ತು ಯಪ್ಪ ಕಾಲಕ್ಕೆ ಕೊಡಲ್ಪಡತಕ್ಕದ್ದು.

ರೂಲ್ IV.—IIIನೇ ರೂಲ್ ಅನುಸರಿಸಿ ಬಟ್ಟು ಬಿಕರೀ ಬಗ್ಯೂ, ಚಿಲ್ಲರೆ ಬಿಕರಿ ಬಗ್ಯೂ, ಹೊಟೇಲ್‌ಗಳಲ್ಲಿ ಬಿಕರಿ ಬಗ್ಯೂ ಮತ್ತು ರಿಫ್ರೆಷ್‌ಮೆಂಟ್ ರೂಂ ದುಕಾನ್‌ಗಳಲ್ಲಿ ಬಿಕರಿಬಗ್ಯೂ ಕೊಡಲ್ಪಡುವ ಲೈಸೆನ್ಸುಗಳು ವೇರವೇರೆಯಾಗಿ ಯಿರತಕ್ಕದ್ದು; ಆದರೆ ಒಬ್ಬ ಮನುಷ್ಯನು ಯರಡು ಹೆಚ್ಚು ಲೈಸೆನ್ಸುಗಳನ್ನು ಉಂಟಾಗಿರಬಹುದು.

ಬಟ್ಟು, ಚಿಲ್ಲರೆ ವಗೈರೆ ಮಾರಾಟದ ಲೈಸೆನ್ಸು.

ರೂಲ್ V.—IIIನೇ ರೂಲ್ ಅನುಸರಿಸಿ ಕೊಡಲ್ಪಡುವ ಪ್ರತಿ ಲೈಸೆನ್ಸಿಗೂ ಇದರಡಿಕಂಡ ದರವಂತೆ ಲೈಸೆನ್ಸ್ ಫೀ ವಸೂಲ್ ಮಾಡಲ್ಪಡತಕ್ಕದ್ದು:—

ಲೈಸೆನ್ಸಿನ ದರಗಳು.

| | ರೂ. | |
|---|---|---|
| ಬಟ್ಟು ಮಾರಾಟದ ಲೈಸೆನ್ಸಿಗೆ .. .. | 25 | 31ನೇ ಮಾರ್ಚಿಗೆ ಆಖೈರಾಗುವ ಸಾಲ್ ಯಾ ಅದರ ಕೆಲವು ಕಾಲಕ್ಕೆ. |
| ಚಿಲ್ಲರೆ—ಡಿಟೋ ಡಿಟೋ . .. | 50 | |
| ಹೊಟೆಲ್ ಲೈಸೆನ್ಸಿಗೆ .. .. | 25 | |
| ರಿಫ್ರೆಷ್‌ಮೆಂಟ್ ರೂಮು ದುಕಾನಿನ ಲೈಸೆನ್ಸಿಗೆ . .. | 25 | |

(ಷರಾ.—ಬೆಂಗಳೂರು ಮತ್ತು ಮೈಸೂರು ಪಹರ್‌ಗಳಲ್ಲಿ ಚಿಲ್ಲರೆ ಮಾರಾಟದ ಬಗ್ಯೆ ಮತ್ತು ಹೊಟೆಲ್ ಯಾ ರಿಫ್ರೆಷ್‌ಮೆಂಟ್‌ರೂಂ ದುಕಾನಿಗೋಸ್ಕರ ಲೈಸೆನ್ಸ್ ಪಡೆಯಿರುವ ಪ್ರತಿ ಮನುಷ್ಯನೂ ಮೇಲ್ಕಂಡ ಲೈಸೆನ್ಸ್ ಫೀ ಮೊಬಲಗು ಪಾವತಿ ಮಾಡುವದು ಹೆವಾಯಿ ಮ್ಯುನಿಸಿಪಲ್ ರೆಗ್ಯುಲೇಷನಿನ 58ನೇ ಸೆಕ್ಷರ್ಷ ಅನುಸರಿಸಿ ತಾನು ವಹಿವಾಟ್ಟು ನಡಿಸುವ ಸ್ಥಳವನ್ನು ರಜಿಸ್ಟ್ರಿ ಮಾಡಿಸಲಿಕ್ಕೂ ಅಂಥಾ ರಜಿಸ್ಟ್ರೇರ್ಷ ಸರ್ಟಿಫಿಕೇಟ್ ಪಡೆಯುವ ಬಗ್ಯೆ ಸದರಿ ರೆಗ್ಯುಲೇಷನಿನ C. 11ನೇ ಗುರ್ತಿನ ಷೆಡ್ಯೂಲಿನ IIನೇ ಕ್ಲಾಸ್, IIIನೇ ಕ್ಲಾಸ್ ಅಥವಾ IVನೇ ಕ್ಲಾಸ್ ಅನುಸರಿಸಿ ಸೂಲಿಯಾನಾ ವಂದು ಫೀಜ್ ಮೊಬಲಗನ್ನು ಮ್ಯುನಿಸಿಪಾಲಿಟಿಗೆ ಪಾವತಿ ಮಾಡಲಿಕ್ಕೂ ಬದ್ಧನಾಗಿರುತ್ತಾನೆ.)

ರೂಲ್ VI.—IIIನೇ ರೂಲ್ ಅನುಸರಿಸಿ ಕೊಡಲ್ಪಟ್ಟ ಲೈಸೆನ್ಸಿನ ದೆಶೆಯಿಂದ, ಮೈಸೂರು ಗವರ್ನಮೆಂಟ್ ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರ್ಮಾಡಲ್ಪಟ್ಟ ಫ್ರೂಫಿಗೆ ಸಮನಾದ ಮತ್ತು ಫ್ರೂಫಿಗೆ ಮೇಲ್ಪಟ್ಟ "ಡಬಲ್ ಡಿಸ್ಟಿಲೆಡ್" ಯಾನೆ ಯಿಮ್ಮಡಿ ಭಟ್ಟಿ ಯಿಳಿಸಿದ ಸಾರಾಯಿಯನ್ನಾಗಲೀ ಅಥವಾ ಒಡಂಬಡಿಕೆ ಪ್ರಕಾರ ಆಮದ್ ಮಾಡಲ್ಪಟ್ಟು 1881ನೇ ಇಸವಿ XXIIನೇ ಆಕ್ಟಿನ 7ನೇ ಸೆಕ್ಷರ್ಷ ಅನುಸರಿಸಿ ತೆರಬೇಕಾದ ತೀರ್ವೆ ದರವನ್ನು ಪೂರ್ತಿಯಾಗಿ ಪಾವತಿ ಮಾಡಲ್ಪಟ್ಟ ಯಿಮ್ಮಡಿ ಭಟ್ಟಿ ಯಿಳಿಸಿದ ಕಂತ್ರಿ ಸ್ಪಿರಿಟ್ ಸಾರಾಯಿಯನ್ನಾಗಲಿ ಯಾ ಸದರೀ ಡಿಸ್ಟಿಲೇರಿಯಿಂದ ವೊಪರ್‌ನಿಶ್ ಇದರಡಿಕಂಡ ಗುರ್ತಿನ ಛಾವೆ ಲೇಬಿಲನಿಶ್ ವದಗಿಸಬಹುದಾದ ಆಂಥಾ ಸಾರಾಯಿ ಯಾ ಕಂತ್ರಿ ಸ್ಪಿರಿಟ್ ಸಾರಾಯಿಯ ಯಾವ ತಯಾರಿಯನ್ನಾಗಲೀ ಬಿಕರೀ ಮಾಡುವದಕ್ಕೆ ಅಧಿಕಾರ ಉಂಟಾಗಿರತಕ್ಕದ್ದು.

ಡಬಲ್ ಡಿಸ್ಟಿಲೆಯಾನೆ ಯಿಮ್ಮಡಿ ಭಟ್ಟಿ ಯಿಳಿಸಿದ ಸ್ಪಿರಿಟ್ ಸಾರಾಯಿ ಮತ್ತು ಆ ಸಂಭಂಧವಾದ ತಯಾರಿಯನ್ನು ಕುರಿತು.

ರೂಲ್ VII.—ಈ ರೂಲ್ಸ್ ಅನುಸರಿಸಿ ರಿಫ್ರೆಷ್‌ಮೆಂಟ್ ರೂಮಿಗೆ ಲೈಸೆನ್ಸುಗಳು, ಬೆಂಗಳೂರು ವ ಮೈಸೂರು ಪಟ್ಟಣಗಳಲ್ಲಿ ಮಾಹೆಯಾನಾ 25 ರೂಪಾಯಿಗಳಿಗೆ ಕಮ್ಮಿಯಿಲ್ಲದೆಯೂ ಅನ್ಯತ್ರ 10 ರೂಪಾಯಿಗಳಿಗೆ ಕಮ್ಮಿ ಯಿಲ್ಲದೆಯೂ ಕೊಡಲ್ಪಡತಕ್ಕದ್ದು.

ರೂಲ್ VIII.—ಯಾವ ಎಕ್ಸೈಸ್ ಆಫೀಸರಾದರು, ಈ ರೂಲ್ಸಿ ಅನುಸರಿಸಿ ವಬ್ಬ ಬಿಕರಿದಾರನು ಪರಾಯಿದೇಕದ ಸ್ಪಿರಿಟ್ ಸಾರಾಯಿ ಯಾ ಪರಾಯಿದೇಕದ ಉಕ್ಕಿದ ಸಾರಾಯಿಯನ್ನು ಬಿಕರಿಮಾಡತಕ್ಕಂಥಾ ಯಾವದಾದರೂ ದುಕಾ ಯಾ ಆವರಣವನ್ನ ಹಗಲಿನಲ್ಲಾಗಲೀ ಯಾ ರಾತ್ರಿಯಲ್ಲಾಗಲೀ ಯಾವ ಕಾಲದಲ್ಯಾದರು ಪ್ರವೇಶಿಸಿ ತನಿಖೆ ಮಾಡಬಹುದು.

ರೂಲ್ IX.—IIIನೇ ರೂಲ್ ಅನುಸರಿಸಿ ಕೊಡಲ್ಪಟ್ಟ ಲೈಸೆನ್ಸುಗಳಲ್ಲಿ ಯಿದಕ್ಕೆ ಲಗ್ಗತ್ತಿರುವ ನಮೂನೆಯಲ್ಲಿರತಕ್ಕವು.

---

"ಪರಾಯಿ ದೇಕದ ಸಾರಾಯಿ" ಮತ್ತು "ಪರಾಯಿ ದೇಕದ ಉಕ್ಕಿದ ಸಾರಾಯಿ" ಇವುಗಳನ್ನು ಬಟ್ವಾಗಿ ಮಾರುವ ಬಗ್ಗೆ ಲೈಸೆನ್ಸ.

ಡಿಸ್ಟ್ರಿಕ್ಟಿನ

ಡೆಪ್ಯುಟಿ ಕಮ್ಮಿಷರಾದ

ಯೆಂಬ

ನಾನು,

ಸ್ಥಳದಲ್ಲಿ ನಾಸವಾಗಿರುವ ವಶ

ಗನಾದ

ಯೆಂಬುವನಿಗೆ, ಇದರಡಿ ವಿಧಿಸಲ್ಪಟ್ಟ ಷರತ್ತುಗಳಿಗೆ ಒಳಪಟ್ಟು ಮತ್ತು [ಸಾಲಿಯಾನಾ ರೂಪಾಯಿಗಳ ಲೈಸೆನ್ಸು ಫೀ ಮೊಬಲಗನ್ನು ಪೂರತೀ ಮಾಡುವ ಪನತ್ತಿನ ವೇಲೆ ಪರಾಯಿ ದೇಕದ ಸಾರಾಯಿ ಮತ್ತು ಪರಾಯಿ ದೇಕದ ಉಕ್ಕಿದ ಸಾರಾಯಿಯನ್ನು] ಸದರೀ ಸ್ಥಳದಲ್ಲಿರ

ತಕ್ಕಂಥಾ ಡೋರ್ ನಂಬರ್ ನೇ ದುಕಾನಿನಲ್ಲಿ ಒಟ್ಟಾಗಿ ಬಿಕರಿ ಮಾಡುವ ಬಗ್ಗೆ ಯಿದರ ಪಕೆಯಿಂದ ಅಧಿಕಾರ ಕೊಟ್ಟಿರುತ್ತೇನೆ.

ಷರತ್ತುಗಳು.

I. ಈ ಲೈಸೆನ್ಸುದಾರನು ತತ್ಕಾಲದಲ್ಲಿ ಜಾರಿಯಲ್ಲಿರುವ ಎಕ್ಸೈಸ್ ಯಾನೇ ಅಬ್ಕಾರಿ ಕಾನೂನುಗಳಿಗೂ (1885ನೇ ಇಸವಿ IIIನೇ ನಂಬರ್ ಮೈಸೂರು ರೆಗ್ಯುಲೇಷನ್ ಆದ) 1881ನೇ ಇಸವಿಯ XXIIನೇ ನಂಬರ್ ಎಕ್ಸೈಸ್ ಆಕ್ಟಿನ 55ನೇ ಸೆಕ್ಷನ್ ಅನುಸರಿಸಿ ಶ್ರೀಮನ್ಮಹಾರಾಜಪರಾಜಾ ಸಾಹೆಬ್ ಬಹದ್ದೂರವರ ಸರ್ಕಾರದಿಂದ ಉಂಟುಮಾಡಲ್ಪಟ್ಟ ತವಾಂರೂಲ್ಸ್ ಯಾನೆ ನಿಬಂಧನೆಗಳಿಗೂ ಸಕಲವಿಷಯದಲ್ಲಿಯೂ ಬದ್ಧನಾಗಿರತಕ್ಕದ್ದು.

II. (*a*). ಈ ಲೈಸೆನ್ಸು, ಯಿದಕ್ಕೆ ಕೇರಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಗುಣವುಳ್ಳ ಪರಾಯಿದೇಕದ ಸಾರಾಯಿ ಅಥವಾ ಪರಾಯಿದೇಕದ ಸಾರಾಯಿ ಮತ್ತು ಉಕ್ಕಿದ ಸಾರಾಯಿ ಅಥವಾ ಸಂದರ್ಭಾನುಸಾರ ಪರಾಯಿ ದೇಕದ ಉಕ್ಕಿದ ಸಾರಾಯಿ ಯಿವುಗಳನ್ನ ಮಾರುವ ಬಗ್ಗೆ ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರವರು ತಾವು ಸ್ವತಃ ಆಗಲಿ ಅಥವಾ ಈ ಲೈಸೆನ್ಸುದಾರನ ಖಾಯಿಷ್ ವೇಲಾಗಲಿ ಸದರೀ ಪಟ್ಟಿಗೆ ಹೆಚ್ಚು ಅಂಕಗಳನ್ನು ಕೇರಿಸುವದಕ್ಕೂ ಅಥವಾ ಬದಲಾಯಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಅಂಥಾ ಪ್ರತಿ ಹೆಚ್ಚು ಅಂಕಗಳೂ ಅಥವಾ ಬದಲಾವಣೆಗಳೂ ಡೆಪ್ಯುಟಿ ಕಮ್ಮಿಷನರವರ ರುಜುವಿನಿಂದ ದೃಢಪಡಿಸಲ್ಪಡತಕ್ಕದ್ದು.

(*b*) ಸದರೀ ಪಟ್ಟಿಯಲ್ಲಿ ನಮೂದಿಸಲ್ಪಡದ ಯಾ ಅದಕ್ಕೆ ಕೇರಿಸಲ್ಪಡದ ಯಾ ಮೇಲ್ಕಂಡಂತೆ ಬದಲಾಯಿಸಲ್ಪಡದ ಗುಣವುಳ್ಳ ಯಾವ ಪರಾಯಿದೇಕದ ಸಾರಾಯಿಯಾಗಲಿ ಉಕ್ಕಿದ ಸಾರಾಯಿಯಾಗಲಿ ಈ ಲೈಸೆನ್ಸು ಅನುಸರಿಸಿ ಮಾರಲ್ಪಡಕೂಡದು.

(ಯಾವ ಗುಣವುಳ್ಳ ಸಾರಾಯಿಯು ಬಿಕರಿಬಗ್ಗೆ ಈ ಲೈಸೆನ್ಸು ಕೊಡಲ್ಪಡುತ್ತೊ ಆ ಬಾಬತು ಪಟ್ಟಿಯನ್ನು ಯಿಲ್ಲಿ ದಾಖಲ್ಮಾಡತಕ್ಕದ್ದು.)

III. ಮೇಲ್ಕಂಡ ಸದರೀ ದುಕಾನಿನಲ್ಲಿ ಒಂದು ಸಲಕ್ಕೆ ಯನಡು ಯಿಂಪೀರಿಯಲ್ ಗ್ಯಾಲ್ಲನ್‌ಗಳಿಗಿಂತಲಾಗಲಿ ಅಥವಾ ಗೊತ್ತಾದ ಹನ್ನೆರಡು ಕ್ವಾರಟು ಬೀಸೆಗಳಿಗಿಂತ ಕಮ್ಮಿಯಾದ ತೇದಾದುಳ್ಳ ಪರಾಯಿ ದೇಕದ ಸಾರಾಯಿಯಾವದೂ ಅಥವಾ ಉಕ್ಕಿದ ಸಾರಾಯಿಯಾದರೂ ಬಿಕರಿ ಮಾಡಲ್ಪಡಕೂಡದು.

IV. (1) ಪರಾಯಿ ದೇಶದ ಯಾವ ತರಹೆ ಸಾರಾಯಿಯಾದರೂ ಅಥವಾ ಉಕ್ಕಿದ ಸಾರಾಯಿಯಾದರೂ, ಯಾವ ಯೂರೋಪಿಯರ್ ನಾ ಕಮ್ಮಿಷ್ಟರ್ಡ ಆಫಿಸರಿಗಾಗಲಿ ಅಥವಾ ಪ್ರೈವೇಟ್ ಸೋಲ್ಜರಿಗಾಗಲಿ ಅಥವಾ ಸದರೀ ಜನಗಳಿಗೆ ಕೀರಿದ ಯಾ ಸಂಬಂಧಪಟ್ಟ ಯಾವ ಯೂರೋಪಿಯರ್ ಅಥವಾ ಈಸ್ಟ್ ಇಂಡಿಯರ್ ಹೆಂಗಸಿಗಾಗಲಿ, ಕಮಾಂಡಿಂಗ್ ಆಫಿಸರ ಅಥವಾ ಅವರಿಂದ ಈ ಬಗ್ಯಾಗಿ ಅಧಿಕಾರ ಕೊಡಲ್ಪಟ್ಟ ಆಫಿಸರನ ಬರಹ ಮೂಲಕವಾದ ಅಪ್ಪಣೆ ವಿನಾ ಮಾರಲ್ಪಡಕೂಡದು, ಅಥವಾ ಎಷ್ಟುಮಟ್ಟಿಗಾದರೂ ಕೊಡಲ್ಪಡಕೂಡದು. ಮತ್ತು ಅಂಥಾ ಬರಹಮೂಲಕವಾದ ಅಪ್ಪಣೆಯು ಈ ಲೈಸೆನ್ಸುದಾರನಿಂದ ಅಂಥಾ ಬಿಕರಿಬಗ್ಯೆ ವೌಚರ್ ತರ್ಕ ಉಳಿಸಿಕೊಳ್ಳಲ್ಪಟ್ಟು ಅವಶ್ಯಕವಾದಾಗ ಯಾವ ಯೆಕ್ಸೈಜ್ ಆಫಿಸರಿಗಾದರೂ ತೋರಿಸಲ್ಪಡತಕ್ಕದ್ದು.

(2) ಸದರೀ ದುಕಾನಿನಿಂದ ಈ ಲೈಸೆನ್ಸುದಾರ ಅಥವಾ ಬಿಕರಿದಾರನಿಗೆ ಮರ್ಯಾದಸ್ಥರೆಂದು ಗೊತ್ತಾಗಿರುವ ಜನಗಳಿಗೆ ಮಾತ್ರವೇ ಬಿಕರಿ ಮಾಡಲ್ಪಡತಕ್ಕದ್ದು.

V. ಸದರೀ ವೇಲ್ಕಂಡ ದುಕಾನು ರೋಜೀನಾ ರಾತಿ) 9 ಘಂಟೆಗೆ ಮುಚ್ಚಲ್ಪಡತಕ್ಕದ್ದು. ಮತ್ತು ಪ್ರಾತಃಕಾಲ 6 ಘಂಟೆ ವರಿಗೆ ತೆರಿಯಲ್ಪಡಕೂಡದು.

VI. ಈ ಲೈಸೆನ್ಸುದಾರನು, ಅಸಿಸ್ಟೆಂಟ್ ಕಮ್ಮಿಷನರ ಹುದ್ದೆಗಿಂತ ಕಮ್ಮಿ ಯಿಲ್ಲದ ಯಾವ ಆಫಿಸರರಿಂದಾದರೂ ಅಪ್ಪಣೆ ಮಾಡಲ್ಪಟ್ಟ್ಯಾಗ ಅವರಲ್ಲಿಯಾಗಲೀ ಅಂಥಾ ಆಫೀಸರರಿಂದ ಅಧಿಕಾರ ಕೊಡಲ್ಪಟ್ಟ ಯಾವ ಯಕ್ಸೈಸ್ ಆಫಿಸರರಲ್ಯಾಗಲೀ ಈ ಲೈಸೆನ್ಸು ಯಾವ ಸಾರಾಯಿಮಾರಾಟದ ಬಗ್ಯಾಗಿ ಕೊಡಲ್ಪಟ್ಟಿರುತ್ತೋ ಅಂಥಾ ತಮಾಂ ಪರಾಯಿದೇಶದ ಸ್ಪಿರಿಟ್ ಸಾರಾಯಿ ಮತ್ತು ಉಕ್ಕಿದ ಸಾರಾಯಿ ಯಿವುಗಳ ಆಮದ್ ತೋರಿಸುವ ಅಸಲ್ ಯ್ಯಿವಾಯಿಸ್ ಯಾನೆ ಪಟ್ಟಿಯನ್ನ ಹಾಜರ್ ಮಾಡಲು ಬದ್ಧನಾಗಿರತಕ್ಕದ್ದು.

VII. ಈ ಲೈಸೆನ್ಸುದಾರನು ರೂಲ್ಸ್ ಅನುಸರಿಸಿ ಕೊಡಲ್ಪಟ್ಟ ಒಟ್ಟು ಯಾ ಚಿಲ್ಲರೆ ಬಿಕರೀದಾರನಿಗೆ ಯಾವ ಪರಾಯಿ ದೇಶದ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಅಂಥಾ ಸಾರಾಯಿಯನ್ನ ಸದರೀ ಒಟ್ಟು ಯಾ ಚಿಲ್ಲರೆ ಬಿಕರೀದಾರನು ಮಾರುವ ಬಗ್ಯೆ ಅವನ ಲೈಸೆನಿನ ದೆಶೆಯಿಂದ ಅಧಿಕಾರ ಪಡೆದಿದ್ದರೆ ಹಾಂಗೆ ವರ್ಗಮಾಡಬಹುದು, ಯಾ ಬಿಕರಿ ಮಾಡಬಹುದು. ಅಂಥಾ ಬಿಕರಿ ಯಾ ವರ್ಗವು ಯಕ್ಸೈಸ್ ಇಲಾಖೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಆವರ ಸೈ ಮೊಹರಿನಿಂ ಖರಹ ಮೂಲಕವಾದ ಹುಕುಂಯಾನೆ ಪ್ಯಾಸ್ ಚೀಟಿಯನ್ನ ದ್ವಿಪ್ರತಿಯಾಗಿ ಮುಂಚಿತವಾಗಿ ಪಡೆದ ಹೊರತು ಮಾರಲ್ಪಡಕೂಡದು. ಡ್ಯುಪ್ಲಿಕೇಟ್ ಪ್ಯಾಸ್ ಚೀಟಿಯು, ಅಂಥಾ ಬಿಕರೀ ಯಾ ವರ್ಗಕೋಸ್ಕರ ಹಾಂಗೆ ಬಿಕರಿ ಯಾ ವರ್ಗದ ಮೂಲಕ ಪಡೆದ ಲೈಸೆನ್ಸುದಾರನಲ್ಲಿ ವೌಚರ್ ತರ್ಕ ಉಳಿಸಿಕೊಳ್ಳಲ್ಪಟ್ಟು ಯಕ್ಸೈಸ್ ಇಲಾಖೆಯ ಯಾವ ಆಫೀಸರೇ ಆಗಲಿ ಅಪೇಕ್ಷಿಸಿದಾಗ ಹಾಜರ್ಮಾಡಲ್ಪಡತಕ್ಕದ್ದು, ಮತ್ತು ಒರಿಜನಲ್ ಪ್ಯಾಸ್ ಚೀಟಿಯು ಖರೀದೀದಾರ ವ ಬಿಕರೀದಾರರಿಂದ ತಾರೀಖ್ ನಮೂದಿಸಿ ರುಜು ಮಾಡಲ್ಪಟ್ಟು ಯಕ್ಸೈಸ್ ಇಲಾಖೆಯಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ವಾಪಸ್ ಮಾಡಲ್ಪಡತಕ್ಕದ್ದು.

VIII. ಈ ಲೈಸೆನ್ಸುದಾರನು, ರೋಜೀನಾ ತಿಂಗಳು ವ ತಾರೀಖು ನಮೂದಿನಿಂದ ತಾನು ಪಡೆದ ಪರಾಯುದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಯ ತೇದಾದು ವ ತಪಶೀಲನ್ನೂ ಅವು ಸರಬರಾಯಿ ಮಾಡಲ್ಪಟ್ಟ ವರ್ಗವನ್ನೂ ಬಿಕರೀ ಮಾಡಲ್ಪಟ್ಟ ತೇದಾದು ಮತ್ತು ಕಿಮ್ಮತ್ತನ್ನೂ, ಬಿಕರೀಗೆ ಪಡೆದ ಮನುಷ್ಯ ಫಲಾನೆಯವನೆಂಬುದನ್ನೂ ಮತ್ತು ಹಾಜರಿಯಲ್ಲಿ ಕಿಲ್ಕು ಯಿರತಕ್ಕ ತೇದಾದನ್ನೂ ಸುದಾ ಸಾಚಾ ವ ಕರಾರ್‌ವಾಕಾ ಆಗಿ ಲೆಕ್ಕ ಬರೆದಿಡತಕ್ಕದ್ದು. ಅಂಥಾ ಲೆಕ್ಕವು ಯಕ್ಸೈಸ್ ಇಲಾಖೆ ಆಫೀಸರರಿಂದ ಯಾವಾಗಲಾಗಲಿ ತನಿಖಿ ನೋಡಲ್ಪಡತಕ್ಕ ಬಗ್ಯೆ ಹಾಜರಿರತಕ್ಕದ್ದು. ಈ ಬಾಬತು ಲೆಕ್ಕದ ಗೋಷ್ವಾರೆಯು, ಅದನ್ನು ಬರಮಾಡಿಕೊಳ್ಳುವದಕ್ಕೆ ನಿಯಮಿಸಲ್ಪಟ್ಟ ಆಬ್ಕಾರಿ ಆಫೀಸರರಿಗೆ ದ್ವಿಪ್ರತಿಯಾಗಿ ತಯಾರ್ಮಾಡಲ್ಪಟ್ಟು ಮಾಹೆಯಾನಾ ಕಳುಹಿಸಲ್ಪಡತಕ್ಕದ್ದು, ಆವರು ತನಿಖೆಯಿಂದ ಡೆಪ್ಯುಟಿ ಕಮ್ಮಿಷನರವರ ಯಕ್ಸೈಸ್ ಇಲಾಖೆಗೆ ರವಾನಿಸತಕ್ಕದ್ದು.

IX. ಈ ಲೈಸೆನ್ಸು ಕ್ರಯ, ದಾನ ಆಧಾರ ಮೂಲಕವಾಗಲೀ ಯಾ ಅನ್ಯಥಾ ಆಗಲೀ ಪರಭಾರೆ ಮಾಡಲ್ಪಡಕೂಡದು ಮತ್ತು ಅದರಲ್ಲಿ ನಮೂದಾದ ಮನುಷ್ಯನು ವಿನಾ, ಇತರ ಯಾರಿಗೂ ಅದರಲ್ಲಿ ಕಂಡಂತೆ ನಡಿಯುವದಕ್ಕೆ ಅಧಿಕಾರ ವಿರುವದಿಲ್ಲಾ.

X. ಈ ಲೈಸೆನ್ಸುದಾರನು, ದುಕಾನಿನಲ್ಲಿ ತನಿಗೋಸ್ಕರ ಕೆಲಸ ನಡಿಸುವ ಬಗ್ಯಾಗಿ ಒಬ್ಬ ದುಕಾನ್‌ದಾರ ಯಾ ಬಿಕರೀದಾರನನ್ನು ನೇಮಿಸಬಹುದು, ಪರಂತು ಅಂಥಾ ಮನ್ಯುಷ್ಯ ಯಾ ಮನುಷ್ಯನ ಹೆಸರು ಮುಂಚಿತವಾಗಿ ಡೆಪ್ಯುಟಿ ಕಮ್ಮಿಷ್ಟರವರ ಆಫೀಸಿನಲ್ಲಿ ರಜಿಸ್ಟರು ಮಾಡಲ್ಪಟ್ಟು ಅಂಥಾ ದುಕಾನ್‌ದಾರ ಯಾ ಬಿಕರೀದಾರನ ಹೆಸರು ಈ ಲೈಸೆನಿನ ಮೇಲ್‌ಭಾಗದಲ್ಲಿ ನಮೂದ್ ಮಾಡಲ್ಪಡಬೇಕು.

XI. ಮೇಲ್ಕಂಡ ಯಾವದೊಂದು ಷರತ್ತುಗಳಾದರೂ ಉಲ್ಲಂಘಿಸಲ್ಪಟ್ಟರೆ ಲೈಸೆನ್ಸುದಾರನು, ಯಕ್ಸೈಸ್ ಕಾರ್ನೂನಿಂದಲೂ ಮತ್ತು ಅದಕ್ಕೆ ಸಂಬಂಧಪಟ್ಟ ರೂಲ್ಸುಗಳಿಂದಲೂ ಆ ಬಗ್ಯಾಗಿ ವಿಧಿಸಲ್ಪಟ್ಟಿರುವ ತಮಾಂ ದಂಡನೆಗಳಿಗೆ ಗುರಿಯಾಗತಕ್ಕದ್ದಲ್ಲದೆ (1885ನೇ ಇಸವಿ IIIನೇ ನಂಬರ ಮೈಸೂರು ರೆಗ್ಯುಲೇಷನ್ ಆದ) 1881ನೇ ಇಸವಿ XXIIನೇ ನಂಬರ ಆಕ್ಟಿನ 13ನೇ ಸೆಕ್ಷನ ಅನುಸರಿಸಿ ಡೆಪ್ಯುಟಿ ಕಮ್ಮಿಷ್ಟರವರಿಂದ ಅವರ ಯುಕ್ತಾನುಸಾರ ಸದರೀ ಲೈಸನ್ಸು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

XII. ಈ ಲೈಸೆನ್ಸು 18 ನೇ ಇಸವಿ ಮಾರ್ಚ್ 31ನೇ ತಾರೀಖುವರೆಗೆ ಜಾರಿಯಲ್ಲಿರತಕ್ಕದ್ದು.

ಡಿಸ್ಟ್ರಿಕ್ಟ್

ಡೆಪ್ಯುಟಿ ಕಮ್ಮಿಷನರ ಆಫೀಸು

ತಾರೀಖು

ಡೆಪ್ಯುಟಿ ಕಮ್ಮಿಷನರ
ಡಿಸ್ಟ್ರಿಕ್ಟ್

ಸ್ಥಳದ,

ವಾಸಸ್ಥನಾದ ಮತ್ತು
ನಮಗನಾದ ಇದರಡಿ ರುಜು ಮಾಡಿರುವ ಹೆಸರುಳ್ಳ
ಮೇಲ್ಕಂಡ ಲೈಸೆನ್ಸುದಾರನಾದ ನಾನು, ನನಿಗೋಸ್ಕರವೂ ನನ್ನ ವಾರಸುದಾರರು, ನ್ಯಾಯವಾದ ಪ್ರತಿನಿಧಿಗಳು ಮತ್ತು ನನ್ನಿಂದ ವರ್ಗ ಪಡೆದವರು ಇವರುಗಳಿಗೋಸ್ಕರವೂ ಮೇಲ್ಕಂಡ ಲೈಸೆನಿನಲ್ಲಿ ವಿವರಿಸಲ್ಪಟ್ಟ ತಮಾಂ ಷರತ್ತು ವ ಬಂಧಂಬಡಿಕೆಗಳನ್ನ ಯಿದರಿಂದ ಬಪ್ಪಿ ರುತ್ತೇನೆ.

ನೇ ತಾರೀಖಿನಲ್ಲಿ

ನಮ್ಮಗಳ ರೂಬರು ಆಫೀಸಿನಲ್ಲಿ
ರುಜು ಮೊಹರ್ ಮಾಡಿ ಕೊಡಲ್ಪಟ್ಟಿರುತ್ತೆ.

ಸಾಕ್ಷಿಗಳು { 1. _____ 2. _____ 3. _____ } ಲೈಸೆನ್ಸುದಾರ { _____ _____ _____ }

ಯಾರ ಮುಂದೆ ರುಜು ಮಾಡಲ್ಪಟ್ಟಿತ್ತೊ
ಅಂಥಾ ಆಫಿಸರರ ರುಜು.

---

## "ಪರಾಯಿ ದೇಶದ ಸ್ಪಿರಿಟ್ ಸಾರಾಯಿ" ವ "ಪರಾಯಿ ದೇಶದ ಉಕ್ಕಿದ ಸಾರಾಯಿ" ಯನ್ನ ಚಿಲ್ಲರೆಯಾಗಿ ಮಾರುವ ಒಗ್ಗೆ ಲೈಸೆನ್ಸ್.

---

ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ
ರಾದ ಯಂಬ ಹೆಸರುಳ್ಳ ನಾನು

ಲ್ಲಿ ವಾಸವಾಗಿರುವ

ನ ಮಗನಾದ ಯಂಬವನ್ನೂ
ಇದರಡೀ ಕಂಡ ಷರತ್ತುಗಳಿಗೂ ಮತ್ತು ಸೂಚನಾ ರೂಪಾಯಿಗಳ ಲೈಸೆನ್ಸ್ ಫೀ ತೆರಲಿಕ್ಕೂ ಬದ್ಧನಾಗಿ
ಲ್ಲಿರುವ ನೇ ನಂಬರುಳ್ಳ ದುಕಾನಿನಲ್ಲಿ ಪರಾ
ಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನ ಚಿಲ್ಲರೆಯಾಗಿ ಮಾರಲಿಕ್ಕೆ ಇದರಿಂದ ಅಧಿಕಾರ ಕೊಟ್ಟಿರುತ್ತೆನೆ.

### ಷರತ್ತುಗಳು.

I. ಈ ಲೈಸೆನ್ಸುದಾರನು, ತತ್ಕಾಲಜಾರೀಲಿರುವ ಎಕ್ಸೈಜ್ ಕಾನೂನಿಗೂ, ಮತ್ತು (1885ನೇ ಇಸವಿಯ ಮೈಸೂರ IIIನೇ ರಗ್ಯೂಲೇಷನ್) 1881ನೇ ಇಸವಿಯ XXIIನೇ ಯಕ್ಸೈಜ್ ಆಕ್ಟಿನ 55ನೇ ಕಲಮ್ ಅನುಸರಿಸಿ ಶ್ರೀಮನ್ಮಹಾರಾಜರ ಸರ್ಕಾರದವರಿಂದ ಏರ್ಪಡಿಸೋಣಾದ ಯಲ್ಲ ನಿಬಂಧನೆಗಳ ಮೇರಿಗೆ ನಡಿದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗತ್ತಾಯಿರುವ ಪಟ್ಟಿಯಲ್ಲಿ ವಿವರಿಸೋಣಾದ ಗುಣಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ, ಯಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಉಕ್ಕಿದ ಸಾರಾಯಿಯನ್ನಾಗಲಿ, ಅಥವಾ ಸಂಗತ್ಯಾನುಸಾರ ಪರಾಯಿ ದೇಶದ ಉಕ್ಕಿದ ಸಾರಾಯಿ) ಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸು ಕೊಡಲ್ಪಟ್ಟಿರುತ್ತೆ, ಡೆಪ್ಯೂಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸ್‌ದಾರನು ಅರ್ಜಿ ಕೊಟ್ಟ ಮೇಲಾಗಲಿ, ಅಂತಾ ಪಟ್ಟಿಗೆ ಹೊಸದಾಗಿ ಕೇರಿಸುವದಕ್ಕೂ ಆಥವಾ ಬದಲಾಯಿಸುವದಕ್ಕೂ ಸ್ವತಂತ್ರವುಳ್ಳವರಾಗಿ ಧಾರೆ. ಪಟ್ಟಿಯೊಳಗಣ ಪ್ರತಿ ಬದಲಾವಣೀಗೂ ಡೆಪ್ಯೂಟಿ ಕಮ್ಮಿಷನರವರು ರುಜು ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣೆಯೊಂದಿಗೆ ಯಿರುವ ಗುರ್ತುಗಳ ಪೈಕಿ ಯಾದಾದರೊಂದು ಗುರ್ತ್ತುಯಿಲ್ಲದ ಯಾವ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ತದ ಸಾರಾಯಿಯನ್ನಾಗಲಿ ಈ ಲೈಸೆನ್ಸಿನ ದೆಸೆಯಿಂದ ಮಾರಲ್ಪಡತಕ್ಕದಲ್ಲವು.

(ಯಾವ ಗುರ್ತುಳ್ಳ ಸಾರಾಯಿಯ ಬಿಕರೀಬಗ್ಯೆ ಈಲೈಸೆನ್ಸ್ ಕೊಡಲ್ಪಡುತ್ತೊ ಆಬಾಬತು ಪಟ್ಟಿಯನ್ನು ಯಿಲ್ಲಿ ದಾಖಲ್ಮಾಡಕ್ಕದ್ದು.)

III. ಪರಾಯಿ ದೇಶದ ಸ್ಪಿರಿಟ್ ಯಾ ಉಕ್ತಿದ ಸಾರಾಯಿಯನ್ನು ವೊಂದು ದಫೆಗೆ ವೊಂದು ಕ್ವಾರ್ಟ್ ೀಸೆ ಅಥವಾ ವೊಂದು ಕೈಂಟ್ ೀಸೆಗಿಂತಲೂ ಕಮ್ಮಿಯಾದ ತೇದಾದನ್ನು ದುಕಾನಿನಿಂದ ಮಾರತಕ್ಕದ್ದಲ್ಲವು.

IV. (1) ಯಾವ ಬಗೆಯಾದ ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ತಿದ ಸಾರಾಯಿಯನ್ನು ಯಷ್ಟುಮಟ್ಟಿಗಾಗಲೀ ಕರ್ಮಾಡಿಂಗ್ ಆಫಿಸರರ ಯಾ ಆ ಬಗ್ಯೆ ಅಂತಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವನಾದರೊಬ್ಬ ಮನುಷ್ಯನ ಬರಹ ಮೂಲಕವಾದ ಅಪ್ಪಣೆ ಶಿವಾಯಿ ಯಾವ ಯೂರೋಪಿಯರ್ ನಾ-ಕಮ್ಮಿಷನ್ಡ್ ಆಫಿಸರ್ ಯಾ ಪ್ರೈವೆಟ್ ಸೋಲ್ಜರಿಗಾಗಲಿ ಯಾ ಸದರಿ ಜನಗಳಿಗೆ ಸಂಬಂಧಪಟ್ಟ ಯಾ ಕೀರಿದ ಯಾವ ಯೂರೋಪಿಯರ್ ಯಾ ಇಸ್ಟ್ ಯಿಂಡಿಯರ್ ಹೆಂಗಸರಿಗಾಗಲಿ ಮಾರಲೂಕೂಡದು, ಕೊಡಲೂಕೂಡದು. ಮತ್ತು ಅಂತಾ ಬರಹ ಮೂಲಕವಾದ ಅಪ್ಪಣೆಯನ್ನು ಲೈಸೆನ್ಸಿದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದಸ್ತ್ಯೆವಜ್ ತರೀಕು ತನ್ನ ಬಳಿ ಯಿಟ್ಟುಕೊಂಡಿದ್ದು ಯಾವ ಯಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(2). ಮೇಲೆ ಹೇಳೋಣಾದ ದುಕಾನಿನಲ್ಲಿ ನಡಿಯುವ ಮಾರಾಟವು ಲೈಸೆನ್ಸಿದಾರನಿಗೆ ಅಥವಾ ಬಿಕ್ರಿದಾರನಿಗೆ ಜನ್ಮಾಗಿ ಗುರ್ತುಳ್ಳ ಗಾರತೆವುಳ್ಳ ಮನುಷ್ಯರುಗಳಿಗೆ ಮಾತ್ರ ನಡಿಯತಕ್ಕದ್ದು.

V. ದುಕಾನಿನ ಆವರಣದೊಳಗೇನೇ ಕುಡಿಯಲ್ಪಡುವ ಬಗ್ಯೆ ಸಾರಾಯಿಯನ್ನು ಮಾರಲಿಕ್ಕೆ ಈ ಲೈಸೆನ್ಸಿನಿಂದ ಅಪ್ಪಣೆ ಉಂಟಾಗಿರುವದಿಲ್ಲ.

VI. ಸದರೀ ಅಂಗಡಿಯನ್ನು ಪ್ರತಿದಿನವೂ ರಾತ್ರೆ 9 ಘಂಟೆಗೆ ಮುಚ್ಚಬೇಕು. ಪ್ರಾರ್ಥನಾಕಾಲ 6 ಘಂಟೆವರಿವಿಗೂ ತೆರಿಯ ಕೂಡದು.

VII. ಅಸಿಸ್ಟೆಂಟ್ ಕಮ್ಮಿಷನರ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇ ಆಗಲಿ ಅಥವಾ ಆಂತಾ ಆಫಿಸರಿಂದ ಅಧಿಕಾರ ಹೊಂದಿದಂಥಾ ಯಾವ ಯಕ್ಸೈಜ್ ಆಫಿಸರೇ ಆಗಲಿ ಕೇಳಿದಾಗ ಲೈಸೆನ್ಸಿದಾರನು ಬಿಕರೀ ಬಗ್ಯೆ ಕೊಡೋಣಾದ ಈ ಲೈಸೆನ್ಸ್ ಅನುಸರಿಸಿ ತರಿದಂಥಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ತಿದ ಸಾರಾಯಿ ಯಿವುಗಳ ಅಸಲ್ ಇನ್ವಾಯಿಸ್ ಲೆಕ್ಕವನ್ನು ಹಾಜರ್ಮಾಡಲಿಕ್ಕೆ ಬದ್ಧನಾಗಿರತಕ್ಕದ್ದು.

VIII. ಈ ಲೈಸೆನ್ಸಿದಾರನು ರೂಲ್ಸ್ ಅನುಸರಿಸಿ ಪರಾಯಿ ದೇಶದ ಯಾವ ಬಗೆಯಾದ ಸ್ಪಿರಿಟ್ ಯಾ ಉಕ್ತಿದ ಸಾರಾಯಿಯನ್ನು ಮಾರಲಿಕ್ಕಾಗಿ ಲೈಸೆನ್ಸ್ ಪಡೆದಂಥಾ ಇತರ ಲೈಸೆನ್ಸಿದಾರನಿಗೆ ಸದರೀ ಸಾರಾಯಿಯನ್ನ ಮಾರಲೂಬಹುದು ಅಥವಾ ವರ್ಗ ಮಾಡಲೂಬಹುದು. ಹಾಗೆ ಮಾರುವಣ ಯಾ ವರ್ಗ ಮಾಡುವಣ ಈ ಬಗ್ಯಾಗಿ ಮುಂಚಿತವಾಗಿ ಎಕ್ಸೈಜ್ ಇಲಾಖೆಯಲ್ಲಿ ಡೆಪ್ಯುಟಿ ಕಮ್ಮಿಷನರವರ ರುಜು ಮೊಹರಿನಿ ಪರಮಿಟ್ ಯಾನೆ ಬರಹ ಮೂಲಕವಾದ ರಹದಾರಿಯ ಯರಡು ಪ್ರತಿಗಳನ್ನ ಪಡೆದ ಹೊರ್ತು, ನಡಿಯಕೂಡದು. ಹಾಂಗೆ ಖರೀದಿ ಯಾ ವರ್ಗ ಮೂಲಕ ಪಡೆದ ಲೈಸೆನ್ಸಿದಾರನು ಆ ಬಗ್ಯಾಗಿ ಸದರೀ ರಹದಾರಿಯ ದುಯ್ಯಂ ಪ್ರತಿಯನ್ನ ದಸ್ತ್ಯೆವಜ್ ತರೀಕು ತನ್ನ ಬಳಿಯಿಟ್ಟುಕೊಂಡಿದ್ದು, ಯಕ್ಸೈಜ್ ಇಲಾಖೆಯ ಯಾವ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು. ಸದರೀ ರಹದಾರಿಯ ಅನ್ವಲ್ ಪ್ರತಿಗೆ ವಿಕ್ರಯದಾರ ವ ಖರೀದಿದಾರ ಈ ವುಭಯತ್ರರೂ ರುಜುಮಾಡಿ ತಾರೀಖು ನಮೂದಿನಿ ಡೆಪ್ಯುಟಿ ಕಮ್ಮಿಷನರವರ ಯಕ್ಸೈಜ್ ಇಲಾಖೆಗೆ ವಾಪಸು ರವಾನೆ ಮಾಡತಕ್ಕದ್ದು.

IX. ಲೈಸೆನ್ಸಿದಾರನು ಯಿಡುವ ಲೆಕ್ಕದಲ್ಲಿ, ತಿಂಗಳು ತಾರೀಖು ವ ಪರಾಯಿ ದೇಶದ ಸ್ಪಿರಿಟ್ ವ ಉಕ್ತಿದ ಸಾರಾಯಿಗಳ ತೇದಾದು, ವ ತರಹೆಗಳು, ಯಾವ ಮೂಲಕವಾಗಿ ಪಡದುಕೊಂಡದ್ದು, ಬಿಕರೀ ಆದ ತೇದಾದು ವ ಆದರ ಮೊಬಲಗು, ಯಾರಿಗೆ ಬಿಕರೀ ಆಯಿತೊ ಅವನ ಹೆಸರು, ಮತ್ತು ರೋಜಿನಾ ಹಾಜರೀ ಸರಕು, ಯಿವುಗಳ ಸಾಚಾ ವ ಕರಾರ್ವಾಕ ತಪಶೀಲು ನಮೂದಿರತಕ್ಕದ್ದು. ಈ ಲೆಕ್ಕುಗಳು ಯಾವಾಗಲೂ ಯಕ್ಸೈಜ್ ಇಲಾಖೆಯ ಆಫಿಸರುಗಳ ತನಖೀಗೆ ಗುರಿಯಾಗಿರತಕ್ಕದ್ದು. ಸದರೀ ಲೆಕ್ಕದ ಗೋಷವಾರೆಯನ್ನ ತನಖೀಯಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿನ ಯಕ್ಸೈಜ್ ಇಲಾಖೆಗೆರವಾನಿಸತಕ್ಕ ಬಗ್ಯಾಗಿ ಮೊಕರರಾಗಿರುವ ಯಕ್ಸೈಜ್ ಆಫಿಸರಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

X. ಈ ಲೈಸೆನ್ಸು ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ. ಮತ್ತು ಯಿದರಲ್ಲಿ ನಮೂದಿರುವವನೇ ಹೊರ್ತು ಅನ್ಯಥಾ ಯಾರಿಗೆ ಆಗಲಿ ಈ ಲೈಸೆನ್ಸಿನ ಷರತ್ತುಗಳನ್ನನುಸರಿಸಿ ನಡಿಯತಕ್ಕ ಅಧಿಕಾರ ವಿರುವದಿಲ್ಲ.

XI. ಲೈಸೆನ್ಸುದಾರನು ದುಕಾನಿನಲ್ಲಿ ತನಿಗಾಗಿ ಕೆಲಸ ನಡಿಸತಕ್ಕ ಬಗ್ಗೆ ದುರ್ಕಾದಾರನ್ನ ಯಾ ಬಿಕರೀದಾರನ್ನ ಮೊಕರ್ರಾಡ ಬಹುದು. ಪರಂತು ಅಂತಾ ಮನುಷ್ಯ ಯಾ ಮನುಷ್ಯರ ಹೆಸರು ಮೊದಲೇ ಡೆಪ್ಯೂಟಿ ಕಮ್ಮಿಷನರವರ ಆಫಿಸಿನಲ್ಲಿ ರಜಿಸ್ಟರಾಗಿರತಕ್ಕದ್ದು. ಮತ್ತು ಅಂತಾ ದುರ್ಕಾದಾರ ಯಾ ಬಿಕ್ರೀದಾರನ ಹೆಸರು ಈ ಲೈಸೆನಿನ ಮೇಲ್ಭಾಗದಲ್ಲಿ ಬರೆದಿರತಕ್ಕದ್ದು.

XII. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಲೈಸೆನ್ಸುದಾರನು ಎಕ್ಸೈಜ್ ಕಾನೂನಿನಲ್ಲಿ ವ ಅದಕ್ಕನುಸರಿಸಿ ಮಾಡೋಣಾದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲಾ ಗುರಿಯಾಗುವದಲ್ಲದೆ, (1885ನೇ ಇಸವಿಯ ಮೈಸೂರ IIIನೇ ರೆಗ್ಯುಲೇಷನ್ ಯಂಬ) 1881ನೇ ಇಸವಿ XXIIನೇ ಆಕ್ಟಿನ 13ನೇ ಸೆಕ್ಷನ ಮೇರಿಗೆ ಡೆಪ್ಯೂಟಿ ಕಮ್ಮಿಷನರವರಿಗೆ ಯುಕ್ತ ತೋರಿದಂತೆ ಲೈಸೆನ್ಸು ಸಹಾ ರದ್ದಾಗಲಿಕ್ಕೆ ಗುರಿಯಾಗಿರತಕ್ಕದ್ದು.

XIII. ಈ ಲೈಸೆನ್ಸು 18 ನೇ ಇಸವಿ ಮಾರ್ಚಿ 31ರ ವರಿವಿಗೆ ಜಾರೀಲ್ಲಿರತಕ್ಕದ್ದು.

ಡಿಸ್ಟ್ರಿಕ್ಟು
ಡೆಪ್ಯೂಟಿ ಕಮ್ಮಿಷನರ ಆಫೀಸು
ತಾರೀಖು ನೇ

ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರು.

---

ಈ ಕೆಳಗೆ ರುಜುಮಾಡಿರುವಂತಾ ಲ್ಲಿ ವಾಸವಾಗಿರುವ
ನ ಮಗನಾದ ಯಂಬ ನಾನು ಮೇಲ್ಕಂಡ ಲೈಸೆನ್ಸುದಾರನಾಗಿಯೂ ನನಿಗಾಗಿ, ನನ್ನ ವಾರಸ್ದಾರಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ, ಇದರ ದೆಸೆಯಿಂದ ಮೇಲ್ಕಂಡ ಲೈಸೆನಿನಲ್ಲಿ ವಿವರಿಸೋಣಾದ ಕರಾರುಗಳಿಗೂ ವ ಷರತ್ತುಗಳಿಗೂ ಪೊಪ್ಪುರುತ್ತೇನೆ.

ತಿಂಗಳ ನೇ ತಾರೀಖಿನಲ್ಲಿ ರವರ ಕಚೇರಿಯಲ್ಲಿ ನಮ್ಮಗಳ ರೂಬರು ರುಜು ನೊಹರಿನೊಡನೆ ಪೊಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು.

1 _____
2 _____
3 _____

_____
ಲೈಸೆನ್ಸುದಾರಿ

ಯಾರ ರೂಬರು ರುಜು ಮಾಡಲ್ಪಟ್ಟಿತೊ ಆ ಆಫಿಸರ ರುಜು.

---

ಬೆಂಗಳೂರು ವ ಮೈಸೂರು ಷಹರ್‌ಗಳ ಮ್ಯುನಿಸಿಪೆಲ್ ರೆಗ್ಯುಲೇಷನಿನ 58ನೇ ಸೆಕ್ಷನ ಅನುಸರಿಸಿ ರಜಿಸ್ಟರ್ ಮಾಡಿದ ಬಗ್ಗೆ ಸರಟಿಫಿಕೇಟ್.

(ಇಲ್ಲಿ ಸರ್‌ಟಿಫಿಕೇಟಿನ ನಮೂನೆ ದಾಖಲ್ಮಾಡಲ್ಪಡತಕ್ಕದ್ದು)

ತಾರೀಖು ನೇ _____

ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
_____ ಮ್ಯುನಿಸಿಪ್ಯಾಲಿಟಿ.

---

## ಹೊಟೆಲ್‌ಗಳಲ್ಲಿ ಮತ್ತು ವೇತನಾನ್ನ ಶಾಲಾಗಳಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿ ಯಿವುಗಳನ್ನ ಮಾರುವ ಬಗ್ಯಾಗಿ ಕೊಡೋಣಾದ ಲೈಸೆನ್ಸ.

_____ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಾದ _____ ಯಂಬ ಹೆಸರುಳ್ಳ ನಾನು _____ ಹೊಟೆಲ್ ಯಂಬ ಹೆಸರುಳ್ಳ ಹೊಟೇಲ್ಲನ್ನು ಯಿಟ್ಟುಕೊಂಡು _____ ಲ್ಲಿ ವಾಸವಾಗಿರುವ _____ ನ ಮಗನಾದ _____ ಯಂಬುವನಿಗೆ ಇದರಡಿ ಕಂಡ ಷರತ್ತುಗಳಿಗೂ ಮತ್ತು ಸಾಲೀನಾ _____ ರೂಪಾಯಿಗಳ ಲೈಸೆನ್ಸ ಫಿ ತೆರಲಿಕ್ಕೆ ಬದ್ಧನಾಗಿ _____ ಸ್ಥಳದಲ್ಲಿರುವ _____ ನೇ ನಂಬರುಳ್ಳ ಆವರಣದೊಳಗೆ ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನೂ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಮಾರಲಿಕ್ಕೆ ಇದರಿಂದ ಅಧಿಕಾರ ಕೊಟ್ಟಿರುತ್ತೇನೆ.

### ಷರತ್ತುಗಳು.

I. ಈ ಲೈಸೆನ್ಸದಾರನು ತತ್ಕಾಲ ಜಾರೀಲಿರುವ ಎಕ್ಸೈಜ್ ಕಾನೂನಿಗೂ ಮತ್ತು (1885ನೇ ಇಸವಿಯ IIIನೇ ಮೈಸೂರ ರೆಗ್ಯುಲೇಷ್ನ) 1881ನೇ ಇಸವಿ XXIIನೇ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನ್ನನುಸರಿಸಿ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಯೇರ್ಪಡಿಸೋಣಾದ ಯಲ್ಲ ನಿಬಂಧನೆಗಳ ಮೇರಿಗೆ ನಡೆದುಕೊಳ್ಳಲಿಕ್ಕೂ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗತ್ ಇರುವ ಪಟ್ಟಿಯಲ್ಲಿ ವಿವರಿಸೋಣಾದ ಗುರ್ತುಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನಾಗಲಿ, ಅಥವಾ ಪರಾಯಿ ದೇಶದ ಉಕ್ಕಿದ ಸಾರಾಯಿ, ಸಂಗತ್ಯಾನುಸಾರ) ಯಾವ ಸಾರಾಯಿಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸ ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸದಾರನು ಅರ್ಜಿ ಕೊಟ್ಟ ಮೇಲಾಗಲಿ, ಅಂತಾ ಪಟ್ಟಿಗೆ ಹೊಸದಾಗಿ ಸೇರಿಸುವದಕ್ಕೂ ಯಾ ಬದಲಾಯಿಸುವದಕ್ಕು ಸ್ವತಂತ್ರನುಳ್ಳವರಾಗಿದ್ದಾರೆ. ಪಟ್ಟಿಯೊಳಗಣ ಪ್ರತಿ ಬದಲಾವಣೆಗೂ ಡೆಪ್ಯುಟಿ ಕಮ್ಮಿಷನರವರು ರುಜು ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣೆಯೊಂದಿಗೆ ಇರುವ ಗುರ್ತುಗಳ ಪೈಕಿ ಯಾವದಾದರೊಂದು ಗುರ್ತಿಲ್ಲದ ಯಾವ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಈ ಲೈಸೆನ್ಸಿನ ದೆಸೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವಗುರ್ತುಳ್ಳ ಸಾರಾಯಿಯು ಬಿಕ್ರೀಬಗ್ಯೆ ಯಿಲ್ಲೈಸೆನ್ಸ ಕೊಡಲ್ಪಟ್ಟಿರುತ್ತೊ ಆಬಾಬತು ಪಟ್ಟಿಯನ್ನು ಯಿಲ್ಲಿ ದಾಖಲ್ಮಾಡತಕ್ಕದ್ದು.)

III. ಮೇಲೆ ಹೇಳಲ್ಪಟ್ಟ ಹೊಟೆಲ್ ಆವರಣಗಳಿಂದ ಹೊರಗೆ ಪರಾಯಿ ದೇಶದ ಯಾವ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಸಾಗಿಸಲ್ಪಡಲೀಸಕೂಡದು ಮತ್ತು ಈ ಲೈಸೆನ್ಸ ಅನುಸರಿಸಿ ಮಾರಲ್ಪಡುವ ಪರಾಯಿ ದೇಶದ ಯಲ್ಲ ಸ್ಪಿರಿಟ್ ಸಾರಾಯಿ ಆಥವಾ ಉಕ್ಕಿದ ಸಾರಾಯಿಯನ್ನ ಆವರಣದೊಳಗೇನೇ ಕುಡಿಯತಕ್ಕದ್ದು. VIIನೇ ಕಲಮಿನ ಪರತ್ತಿನ ಮೇರಿಗೆ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ಕಿದ ಸಾರಾಯಿ ಇವುಗಳನ್ನ ಹೊಟೆಲ್ ಆವರಣದಿಂದ ಸಾಗಿಸುವ ವಿಷಯದಲ್ಲಿ ಈ ಪರತ್ತು ಲಗಾವಾಗತಕ್ಕದ್ದಲ್ಲವು.

IV. (i) ಯಾವ ಬಗೆಯಾದ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನ ಎಷ್ಟು ಮಟ್ಟಿಗಾಗಲಿ ಕಮ್ಯರ್ಷಿಯಲ್ ಆಫೀಸರರ ಯಾ ಆ ಬಗ್ಯೆ ಅಂತಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವನಾದರೊಬ್ಬ ಮನುಷ್ಯನ ಬರಹ ಮೂಲಕವಾದಅಪ್ಪಣೆ ಶಿವಾಯಿ ಯಾವ ಯೂರೋಪಿಯರ್ ನ್ ಕಮ್ಮಿಷನೆಡ್ ಆಫೀಸರ ಯಾ ಪ್ರೈವೇಟ್ ಸೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾ ಕೇರಿದ ಯಾವ ಯೂರೋಪಿಯರ್ ಯಾ ಈಸ್ಟ್ ಇಂಡಿಯರ್ ಹೆಂಗಸರಿಗಾಗಲಿ ಮಾರಲೂಕೂಡದು, ಕೊಡಲೂ ಕೂಡದು, ಮತ್ತು ಅಂತಾ ಬರಹಮೂಲಕವಾದ ಅಪ್ಪಣೆಯನ್ನ, ಲೈಸೆನ್ಸದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದಸ್ತೈವಜು ತರೀಕ ತನ್ನಬಳಿ ಇಟ್ಟುಕೊಂಡಿದ್ದು ಯಾವ ಎಕ್ಸೈಜ್ ಆಫೀಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

ii. ಮೇಲೆ ಹೇಳೋಣಾದ ಹೊಟೆಲ್‌ನಲ್ಲಿ ನಡಿಯುವ ಮಾರಾಟವು ಆ ಹೊಟೆಲ್‌ನಲ್ಲಿ ಬಂದು ಯಿರುವ ಜನಗಳ ಸ್ವಂತ ಉಪಯೋಗಕ್ಕಾಗಿಯಾಗಲಿ ಅಥವಾ ಅವರಿಂದ ಕರೆಸಿಕೊಳ್ಳಲ್ಪಡುವ ಜನಗಳ ಸ್ವಂತ ವುಪಯೋಗಕ್ಕಾಗಲಿ ಮಾತ್ರವೇ ನಡಿಯತಕ್ಕದ್ದು.

V. (a) ಲೈಸೆನ್ಸದಾರನು ಮೇಲೆ ಹೇಳಲ್ಪಟ್ಟ ಸಾರಾಯಿ ಯಾ ಉಕ್ಕಿದ ಸಾರಾಯಿ ಯೊಂದಿಗೆ ಮೋಸಕರವಾಗಿ ನೀರು ಬೆರಿಸಕೂಡದೂ ಯಾ ಬೆರಿಕೆ ಮಾಡಕೂಡದು; ಮತ್ತು ಮೊಸಕರವಾಗಿ ನೀರು ಸೇರಿರುವಂಥಾ ಯಾ ಬೆರಿಕೆಯಾಗಿರುವಂತಾ ಸಾರಾಯಿಯಂದು ತಿಳಿದು ಮಾರಲೂ ಕೂಡದು.

(b) ಮೇಲೆ ಹೇಳಲ್ಪಟ್ಟ ಹೊಟೆಲ್ ಯಾ ಆವರಣದಲ್ಲಿ ಮತ್ತೇರಿ ಬೀಳುವಂತೆ ಆಥವಾ ಅಕ್ರಮವಾದ ನಡತೆ ನಡೆಯಲೀಸ ಕೂಡದು.

(c) ಆ ಸ್ಥಳದಲ್ಲಿ ಯಾವ ವಿಧವಾದ ಜುಜನ್ನಾಗಲಿ ಆಡುವಂತೆ ಮನಃಪೂರ್ತಿಯಾಗಿ ಆಸ್ಪದ ಕೊಡಕೂಡದು.

(d) ವ್ಯಭಿಚಾರಿಗಳನ್ನಾಗಲಿ, ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ, ತನಿಗೆ ತಿಳಿದು ಬರುವಂತೆಯಾದರೂ ಅಥವಾ ಆ ಸ್ಥಳದಲ್ಲಿ ಇರುವಂತೆಯಾದರೂ ಮಾಡಕೂಡದು.

(e) ಮತ್ತು ಫರಾರಿಯಾಗಿಬಂದ ಯಾವ ಯೂರೋಪಿಯರ್ಸ್ ಸೋಲ್ಜರಿಗಾದರೂ ಮನಃಪೂರ್ತಿಯಾಗಿ ಆಸರೆ ಕೊಡಕೂಡದು ಯಾ ಅಂಥಾವನ್ನ ಅಲ್ಲಿ ಬೈಟಿಡಲೂಕೂಡದು.

VI. ಅಸಿಸ್ಟೆಂಟ್ ಕಮ್ಮಿಷನರ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇಆಗಲಿ ಅಥವಾ ಅಂಥಾ ಆಫಿಸರಿಂದ ಅಧಿಕಾರ ಹೊಂದಿದಂತಾ ಯಾವ ಎಕ್ಸೈಜ್ ಆಫಿಸರೇಆಗಲೀ ಕೇಳಿದಾಗ ಲೈಸೆನ್ಸ್‌ದಾರನು, ಬಿಕರೀ ಬಗ್ಯೆ ಕೊಡೋಣಾವ ಈ ಲೈಸೆನ್ಸ್ ಅನುಸರಿಸಿ ತರಿಸಿದಂತಾ ಪರಾಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ತಿದ ಸಾರಾಯಿ ಇವುಗಳ ಅಸಲ್ ಇನ್‌ವಾಯಿಸ್ ಲೆಕ್ಕವನ್ನ ಹಾಜರ್ಮಾಡಲಿಕೆ ಬದ್ಧನಾಗಿರತಕ್ಕದ್ದು.

VII. ಈ ಲೈಸೆನ್ಸ್‌ದಾರನು ತನ್ನ ಕೆಲಸವನ್ನು ನಿಲ್ಲಿಸಿಬಿಡಬೇಕಾದಾಗ _____ ರೂಲ್ಸ್ ಅನುಸರಿಸಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಶದ ಉಕ್ತಿದ ಸಾರಾಯಿಯನ್ನ ಮಾರಲಿಕ್ಕಾಗಿ ಲೈಸೆನ್ಸ್ ಪಡೆದಂಥಾ ಯಿತರ ಲೈಸೆನ್ಸ್‌ದಾರನಿಗೆ ಸದರಿ ಸಾರಾಯಿನ್ನ ಮಾರಲೂಬಹುದು, ಅಥವಾ ವರ್ಗ ಮಾಡಲೂಬಹುದು ; ಹಾಗೆ ಮಾರಬೇಕಾದರೆಯಾಗಲಿ ಯಾ ವರ್ಗಮಾಡಬೇಕಾದರೆ ಆಗಲಿ ಡೆಪ್ಯುಟಿ ಕಮ್ಮಿಷನರವರ ಯಕ್ಸೈಜ್ ಇಲಾಖೆಯಿಂದ ರುಜುವೊಹರಿನಿ ಡುಪ್ಲಿಕೇಟ್ ರಹದಾರಿಯನ್ನ ಮುಂಚಿತವಾಗಿ ಪಡಿಯದೇ ಮಾರಲೂ ಕೂಡದು, ವರ್ಗ ಮಾಡಲೂ ಕುಡದು. ಖರೀದಿ ಮೂಲಕ ಯಾ ವರ್ಗಮೂಲಕ ಪಡೆದುಕೊಂಡ ಲೈಸೆನ್ಸ್‌ದಾರನು ಹಾಗೆ ಪಡಕೊಂಡದ್ದಕ್ಕಾಗಿ ಸದರೀ ರಹದಾರಿಯ ಯರಡನೇ ಪ್ರತಿಯನ್ನ ದಸ್ತೈವಜಾಗಿ ತನ್ನಬಳಿಯಿಟ್ಟುಕ್ಕೊಂಡಿದ್ದು ಎಕ್ಸೈಜ್ ಆಫಿಸರು ತನಿಖೆ ಬಗ್ಯೆ ಯಾವಾಗಲಾದರು ಕೇಳಿದಾಗ ಅದನ್ನು ತೋರಿಸತಕ್ಕದ್ದು. ಖರೀದಿಮಾಡಿದವನು ವ ಖರೀದಿಗೆತೆಗದುಕೊಂಡವನು ಈ ಉಭಯತ್ರರೂ ಅಸಲ್ ರಹದಾರಿಗೆ ತಾರೀಖ: ನಮೂದಿಸಿ ರುಜುಮಾಡಿ ಡೆಪ್ಯುಟಿ ಕಮ್ಮಿಷನರ ಯಕ್ಸೈಜ್ ಆಫಿಸಿಗೆ ವಾಪಸು ಕಳುಹಿಸತಕದ್ದು.

VIII. ಲೈಸೆನ್ಸ್‌ದಾರನು ಯಿಡುವ ಲೆಕ್ಕದಲ್ಲಿ ತಿಂಗಳು, ತಾರೀಖು, ಪರಾಯಿದೇಶದ ಸ್ಪಿರಿಟ್ ವ ಉಕ್ತಿದ ಸಾರಾಯಿಗಳ ತೇದಾದು, ಮತ್ತು ತರಹೆಗಳು ಯಾವ ಮೂಲಕವಾಗಿ ಪಡದುಕೊಂಡದ್ದು, ಬಿಕರಿ ಆದ ತೇದಾದು ವ ಅದರ ಮೊಬಲಗು ಮತ್ತು ರೋಜೀನಾ ಹಾಜರಿ ಸರಕು ಯಿವುಗಳ ಸಾಚಾ ವ ಕರಾರವಾಕಾ ತಪಶೀಲ್ ನಮೂದಿರತಕ್ಕದ್ದು. ಈ ಲೆಖ್ತಗಳು ಯಾವ ಕಾಲದಲ್ಲಾಗಲಿ ಎಕ್ಸೈಜ್ ಆಫಿಸರುಗಳ ತನಖೆಗೆ ಒಳಪಟ್ಟಿರತಕ್ಕದ್ದು. ಈ ಲೆಖ್ತದ ಗೋಪ್ಯಾರೆಯನ್ನ ತನಖೀಯಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿನ ಎಕ್ಸೈಜ್ ಇಲಾಖೆಗೆ ರವಾನಿಸತಕ್ಕ ಬಗ್ಯಾಗಿ ಮೊಕರರಾಗಿರುವ ಎಕ್ಸೈಜ್ ಆಫಿಸರ ಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

IX. ಈ ಲೈಸೆನ್ಸು, ಡೆಪ್ಯುಟಿ ಕಮ್ಮಿಷನರವರ ಬರಹ ಮೂಲಕವಾದ ಆಪ್ಪಣೇ ವಿನಾ ಕ್ರಯ, ದಾನ, ಭೋಗ್ಯ ಯಾ ಮತ್ಯಾವ ರೀತಿಯಿಂದಲೂ ಪರಭಾರೆಯಾಗತಕ್ಕದ್ದಲ್ಲವು.

X. ಮೇಲ್ಕಂಡ ಪರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿನಜಿದರೆ ಲೈಸೆನ್ಸ್‌ದಾರನು, ಎಕ್ಸೈಜ್ ಕಾನೂನಿನಲ್ಲಿ ವ ಅದಕ್ಕನುಸರಿಸಿ ಮಾಡೋಣಾದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲಾ ಗುರಿಯಾಗುವದಲ್ಲದೆ, (1885ನೇ ಇಸವಿಯ ಮೈಸೂರ IIIನೇ ರೆಗ್ಯುಲೇಷನ್) ಎಂಬ 1881ನೇ ಇಸವಿ XXIIನೇ ಆಕ್ಟಿನ 13ನೇ ಸೆಕ್ಷನ್ ಮೇರಿಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತತೋರಿದಂತೆ ಲೈಸೆನ್ಸ್ ಸಹ ರದ್ದಾಗಲಿಕ್ಕೆ ಗುರಿಯಾಗಿರತಕ್ಕದ್ದು.

XI. ಈ ಲೈಸೆನ್ಸ್ 18 ನೇ ಇಸವಿ ಮಾರ್ಚಿ 31ರ ವರಿವಿಗೆ ಜಾರೀಲಿರತಕ್ಕದ್ದು.

_____ ಡಿಸ್ಟ್ರಿಕ್ಟ್
ಡೆಪ್ಯುಟಿ ಕಮ್ಮಿಷನರ ಆಫೀಸ್
ತಾರೀಖು ನೇ

_____ ಡಿ|| ಡೆಪ್ಯುಟಿ ಕಮ್ಮಿಷನರ್.

ಈ ಕೆಳಗೆ ರುಜು ಮಾಡಿರುವಂತಾ _____ ಲ್ಲಿ ವಾಸವಾಗಿರುವ _____

ನ ಮಗನಾದ _____ _____ ಯಂಬ ನಾನು ಮೇಲ್ಕಂಡ ಲೈಸೆನ್ಸ್‌ದಾರನಾಗಿ ನನಗಾಗಿಯೂ ನನ್ನ ವಾರಸ್ದಾರ

ರುಗ್ರಹೋಸ್ತರವೂ ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ, ಮತ್ತು ವರ್ಗ ಪಡೆದಂಥಾವರಿಗೋಸ್ಕರವೂ, ಇದರದಕೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ಕರಾರುಗಳಿಗೂ ವ ಷರತ್ತುಗಳಿಗೂ ಒಪ್ಪಿರುತ್ತೇನೆ.

_____ _____ ತಿಂಗಳ _____ನೇ ತಾರೀಖಿನಲ್ಲಿ _____ ರವರ ಕಚೇರಿಯಲ್ಲಿ ನಮ್ಮಗಳ ರೂಬರು ರುಜು ಮೊಹರಿನೊಡನೆ ಒಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು

1 _____ _____
2 _____ _____
3 _____

_____ _____
ಲೈಸೆನ್ಸುದಾರ

ಯಾರ ರೂಬರು ರುಜು ಮಾಡಲ್ಪಟ್ಟಿತೋ ಆ ಆಫಿಸರ ರುಜು.

ಬೆಂಗಳೂರು ವ ಮೈಸೂರು ಪಟ್ಟಣಗಳ ಮ್ಯುನಿಸಿಪೆಲ್ ರೆಗ್ಯುಲೇಷನಿನ 58ನೇ ಸೆಕ್ಷನ್ ಅನುಸರಿಸಿ ರೆಜಿಸ್ಟರ್ ಮಾಡಿದ ಬಗ್ಗೆ ಸರಟಿಫಿಕೇಟ್.

ತಾರೀಖು _____ನೇ _____ ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
ಮ್ಯುನಿಸಿಪಾಲಿಟಿ.

ಸಿಪ್ರೈಷ್‌ಮೆಂಟ್ ರೂಪ್ಸು ಅಂಡಿಗಳಲ್ಲಿ ಪರಾಯಿ ದೇಶದ ಸ್ಪಿರಿಟ್ ಸಾರಾಯಿ ವ ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನು ಮಾರತಕ್ಕ ಬಗ್ಗೆ ಲೈಸೆನ್ಸು.

ಲೈಸೆನ್ಸಿನ ರೆಜಿಸ್ಟರ್ ನಂಬರು _____

ಲೈಸೆನ್ಸುದಾರನ ಹೆಸರು _____

ದುಕಾನ್‌ದಾರನ ಹೆಸರು _____

ದುಕಾನ್ ಇರುವ ಸ್ಥಳ { ಕಸಬಾ ಜಾಗಾ _____ ; ಬೀದಿ _____ ; ಅಂಗಡಿ ನಂಬರು _____ }

_____ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷ್ನರಾದ _____ _____ ಹೆಸರುಳ್ಳ ನಾನು _____ ಲ್ಲಿ ವಾಸವಾಗಿರುವ _____ ಯಂಬವನ ಮಗನಾದ _____ ಎಂಬವನಿಗೆ ಈ ಕೆಳಗೆ ನಮೂದಾಗುವ ಷರತ್ತುಗಳನ್ನನುಸರಿಸಿ ಮತ್ತು ಸಾಲಿಯಾನಾ _____ ರೂಪಾಯಿಗಳ ಲೈಸೆನ್ಸು ಫೀಯನ್ನು ತೆರಲಿಕ್ಕೆ ಗುರಿಯಾಗಿ, ಮೇಲ್ಕಂಡ ಆವರಣದಲ್ಲಿ ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನೂ ಮತ್ತು ಪರಾಯಿ ದೇಶದ ಉಕ್ಕಿದ ಸಾರಾಯಿಯನ್ನೂ ಚಿಲ್ಲರೆಯಾಗಿ ಮಾರಲಿಕ್ಕೆ ಯಿದರಿಂದ ಅಧಿಕಾರ ಕೊಟ್ಟಿರುತ್ತೇನೆ.

ಷರತ್ತುಗಳು.

I. ಈ ಲೈಸೆನ್ಸುದಾರನು, ತತ್ಕಾಲಜಾರೀಲಿರುವ ಎಕ್ಸೈಜ್ ಕಾನೂನಿಗೂ ಮತ್ತು (1885ನೇ ಇಸವಿಯ ಮೈಸೂರು IIIನೇ ರೆಗ್ಯುಲೇಷನ್) 1881ನೇ ಇಸವಿ XXIIನೇ ಯಕ್ಸೈಜ್ ಆಕ್ಟಿನ 55ನೇ ಸೆಕ್ಷನ್ನನುಸರಿಸಿ ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಯೇರ್ಪಡಿಸೋಣಾದ ಯಲ್ಲ ನಿಬಂಧನೆಗಳ ಮೇರಿಗೆ ನಡೆದುಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

II. (a) ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ವಿವರಿಸೋಣಾದ ಗುರ್ತುಗಳುಳ್ಳ (ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಾ ಪರಾಯಿದೇಶದ ಸ್ಪಿರಿಟ್ ಸಾರಾಯಿ ವ ಪರಾಯಿದೇಶದ ಉಕ್ಕಿದ ಸಾರಾಯಿಯನ್ನಾಗಲಿ ಅಥವಾ ಪರಾಯಿದೇಶದ ಉಕ್ಕಿದ ಸಾರಾಯಿ ಸಂಗತ್ಯಾನುಸಾರ) ಯಾವ ಸಾರಾಯಿಯನ್ನಾಗಲಿ ಮಾರಲಿಕ್ಕೆ ಈ ಲೈಸೆನ್ಸು ಕೊಡಲ್ಪಟ್ಟಿರುತ್ತೆ. ಡೆಪ್ಯುಟಿ ಕಮ್ಮಿಷನರು ತಾವಾಗಿಯೇ ಆಗಲಿ ಅಥವಾ ಲೈಸೆನ್ಸುದಾರನು ಅರ್ಜೀಕೊಟ್ಟ ಮೇಲಾಗಲಿ, ಅಂಥಾ ಪಟ್ಟಿಗೆ ಹೊಸದಾಗಿ ಕೇರಿಸುವದಕ್ಕೂ ಯಾ ಮತ್ಯಾವ ರೀತಿಯಿಂದಲಾದರೂ ಬದಲಾಯಿಸುವದಕ್ಕೂ ಸ್ವತಂತ್ರವುಳ್ಳವರಾಗಿದ್ದಾರೆ. ಪಟ್ಟಿಯೊಳಗಣ ಪ್ರತಿ ಬದಲಾವಣೆಗೂ ಡೆಪ್ಯುಟಿ ಕಮ್ಮಿಷನರವರು ರುಜು ಮಾಡತಕ್ಕದ್ದು.

(b) ಸದರೀ ಪಟ್ಟಿಯಲ್ಲಿ ಬದಲಾವಣೆಯೊಂದಿಗೆ ನಮೂದಿರುವ ಗುರ್ತುಗಳ ಪೈಕಿ ಯಾವದಾದರೊಂದು ಗುರ್ತಿಲ್ಲದ ಯಾವ ಪರಾ ಯಿದೇಶದ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿಯನ್ನಾಗಲಿ ಈ ಲೈಸೆನ್ಸಿನ ದೆಸೆಯಿಂದ ಮಾರಲ್ಪಡತಕ್ಕದ್ದಲ್ಲವು.

(ಯಾವ ಗುರ್ತಿಲ್ಲ ಸಾರಾಯಿಯನ್ನು ಮಾರುವ ಬ್ಯೆ ಈ ಲೈಸೆನ್ಸು ಕೊಡಲ್ಪಟ್ಟಿರುತ್ತೋ ಆ ಬಾಬತು ಪಟ್ಟಿಯನ್ನು ಇಲ್ಲಿ ದಾಖಲ್ಮಾಡಬೇಕು).

III. ಮೇಲ್ಕಂಡ ದುಕಾನಿನಲ್ಲಿ ಮಾರಲ್ಪಡುವ ತಮಾಂ ಪರಾಯಿದೇಶದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯು, ಆವರಣದೊಳಗೇನೆ ಕುಡಿಯಲ್ಪಡಬೇಕೇ ಹೊರ್ತು XIನೇ ಪರತ್ತಿನಲ್ಲಿ ಈಜಂತೆ ವಿನಾ ಯಾವ ನೆಪದಿಂದಲಾಗಲಿ ದುಕಾನಿನಿಂದ ಹೊರಗೆ ವಯ್ಯಲ್ಪಡಕೂಡ ದು, ಪರಾಯಿದೇಶದ ಸ್ಪಿರಿಟ್ ಸಾರಾಯಿಯನ್ನ ಯಾವ ಒಬ್ಬಮನುಷ್ಯನಿಗಾಗಲಿ ವೊಂದು ಪಫೇಗೆ ಯಿರಡುದ್ರಾಂ ವರಿವಿಗೇನೆ ಕೊಡಲ್ಪಡತ ಕ್ಕದ್ದು.

IV. (1) ಯಾವ ಬಗೇಯಾದ ಪರಾಯಿದೇಶದ ಸ್ಪಿರಿಟ್ ಯಾ ಉಕ್ಕಿದ ಸಾರಾಯಿಯನ್ನ ಯಪ್ಪ್ಯಮಟ್ಟಿಗಾಗಲಿ ಕಮ್ಮ್ಯಾಡಿಂಗ್ ಆಫಿಸರರ ಯಾ ಆ ಬ್ಯೆ ಅಂತಾ ಆಫಿಸರಿಂದ ಕ್ರಮವಾಗಿ ಅಧಿಕಾರ ಹೊಂದಿದ ಯಾವ ಮನುಷ್ಯನ ಬರಹ ಮೂಲಕವಾದ ಅಪ್ಪಣೆ ವಿನಾ ಯಿ ಯಾವ ಯೂರೊಪಿಯರ್ಸ್ ನಾಕಮ್ಮಿಷನೆಡ್ ಯಾ ವೈಲೆಡೆ ಸೋಲ್ಜರಿಗಾಗಲಿ ಯಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾ ಕೇರಿದ ಯಾವ ಯೂರೋಪಿಯರ್ಸ್ ಯಾ ಈಸ್ಟ್ ಇಂಡಿಯರ್ಸ್ ಹೆಂಗಸರಿಗಾಗಲಿ ಮಾರಲೂ ಕೂಡದು ಕೊಡಲೂಕೂಡದು, ಮತ್ತು ಅಂತಾ ಬರಹ ಮೂಲಕವಾದ ಅಪ್ಪಣೆಯನ್ನ ಲೈಸೆನ್ಸದಾರನು ಹಾಗೆ ಮಾರಾಟ ಮಾಡಿದ್ದಕ್ಕಾಗಿ ದಸ್ತಾವೇಜ್ ತರೀಕ ತನ್ನಬಳಿ ಯಿಟ್ಟುಕೊಂಡಿದ್ದು ಯಾವ ಎಕ್ಸೈಜ್ ಆಫಿಸರಾಗಲಿ ಕೇಳಿದಾಗ ಹಾಜರ್ಮಾಡತಕ್ಕದ್ದು.

(2) ಹದಿನಾರು ವರುಷಕ್ಕೆ ಕಮ್ಮಿಯಾದ ವಯಸ್ಸುಳ್ಳ ಯಾವ ಹುಡುಗನಿಗಾಗಲಿ ಯಾವ ಶಿಪಾಯಿಗಾಗಲಿ, ಪೊಲೀಸ್ ಶಿಬ್ಬಂದಿಗೆ ಸೇರಿದ ಯಾವ ಮನುಷ್ಯನಿಗೆ ಆಗಲಿ, ಯಾ ನೌಕರ್ತಿಮೇಲಿರುವ ಲೈಲ್ವೆ ಕಂಪೆನಿಯ ನೌಕರನಿಗಾಗಲಿ, ಯಾವ ಬಗೆಯ ಪರಾಯಿದೇಶದ ಯಾ ಉಕ್ಕಿದ ಸಾರಾಯಿಯನ್ನ ಎಪ್ಪ್ಯಮಟ್ಟಿಗೂ ಕೊಡಲೂ ಕೂಡದು, ಯಾ ಮಾರಲೂ ಕೂಡದು.

V. ಈ ಲೈಸೆನ್ಸ ಅನುಸರಿಸಿ ಪರಾಯಿದೇಶದ ಸ್ಪಿರಿಟ್ ವ ಉಕ್ಕಿದ ಸಾರಾಯಿಯನ್ನ ಬಿಕರಿ ಮಾಡುವ ಸ್ಥಳವು ಬಿಹಿರಂಗ ವಾದ ದುಕಾನಾಗಿ ಯಿರತಕ್ಕದ್ದಲ್ಲದೆ ಬಾಗಲುಬಿಳಿ ಯಾ ಕಿಟಕಿಯಲ್ಲಿ ನಿಂತು ನೋಡುವಂತಾವನಿಗೆ ಒಳಗೆ ಯಿರತಕ್ಕವರೆಲ್ಲರೂ ಕಾಣ ಬರುವಂತೆ ಕಟ್ಟಲ್ಪಟ್ಟಿರತಕ್ಕದ್ದು, ಮತ್ತು ದುಕಾನಿನೊಳಗಿಂದ ಯಿನ್ನೊಂದು ಕೊಠಡಿಗಾಗಲಿ, ಆಂಗಳಕ್ಕಾಗಲಿ ಯಾ ಪಾಳಿಯುಳ್ಳ ವ ಪಾರಕ್ಕಾಗಲಿ ಹೋಗುವದಕ್ಕೆ ಆಸ್ಪದವಿರಕೂಡದು.

VI. ಆಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೆಹಾಕಿ ಅದರ ಮೇಲೆ ದುಕಾನಿನ ನಂಬರು, ಲೈಸೆನ್ಸುದಾರನ ಹೆಸರು ವ ಆಂಗಡಿಯವನ ಹೆಸರು, ಇವುಗಳು ವಿರಳವಾಗಿ ಬರೆಯಲ್ಪಟ್ಟಿರತಕ್ಕದ್ದು ಮತ್ತು ಮಾರಲ್ಪಡುವ ಪರಾಬುಗಳ ತಪಾಲ್‌ವಾ ರಿ ನಿರಖುಪಟ್ಟಿಯನ್ನ ಆಂಗಡಿಯೊಳಗೆ ಬಹಿರಂಗವಾಗಿ ತಗಲುಹಾಕಿರತಕ್ಕದ್ದು.

VII—(a) ಲೈಸೆನ್ಸುದಾರನು ಮೇಲೆ ಹೇಳಲ್ಪಟ್ಟ ಸ್ಪಿರಿಟ್ ಸಾರಾಯಿ ಯಾ ಉಕ್ಕಿದ ಸಾರಾಯಿ ಯೊಂದಿಗೆ ಮೋಸಕರವಾಗಿ ನೀರು ಬೆರಿಸಕೂಡದು ಯಾ ಬೆರಿಕೆ ಮಾಡಕೂಡದು ಮತ್ತು ಮೋಸಕರವಾಗಿ ನೀರು ಕೇರಿರುವಂಥಾ ಯಾ ಬೆರಿಕೆಯಾಗಿರುವಂಥಾ ಸಾರಾ ಸಾರಾಯಿ ಯೆಂದು ತಿಳಿದು ಮಾರಲೂಕೂಡದು.

(b) ಮೇಲೆ ಹೇಳಲ್ಪಟ್ಟ ರಿಫ್ರೆಷ್‌ಮೆಂಟ್ ರೂಂ ಆಂಗಡಿಯಲ್ಲಿ ಯಾ ಆ ಆವರಣದೊಳಗೆ ಮತ್ತೇರಿಬೀಳುವಂತೆ ಅಥವಾ ಅಕ್ರಮವಾದ ನಡತೆ ನಡಿಯಲೀಕೂಡದು.

(c) ಅವುಗಳಲ್ಲಿ ಯಾವವಿಧವಾದ ಜೂಜನ್ನಾಗಲಿ ಆಡುವಂತೆ ಮನಃಪೂರ್ತಿಯಾಗಿ ಆಸ್ಪದಕೊಡಕೂಡದು.

(d) ವ್ಯಭಿಚಾರಿಯನ್ನಾಗಲಿ ಪ್ರಸಿದ್ಧವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತನಿಗೆ ತಿಳಿದು ಬರುವಂತೆಯಾದರೂ ಅಥವಾ ಅಂಗಡಿಯಲ್ಲಿ ಇರುವಂತೆಯಾದರು ಮಾಡಕೂಡದು.

(e) ಮತ್ತು ಫರಾರಿಯಾಗಿ ಬಂದ ಯಾವ ಯೂರೋಪಿಯರ್ಸ್ ಸೊಲ್ಜರಿಗಾದರೂ ಮನಃಪೂರ್ತಿಯಾಗಿ ಆಸರೆಕೊಡಕೂಡ ದು, ಅಥವಾ ಅಂತಾವನ್ನ ಅಲ್ಲಿ ಬೈಟಿಡಲೂಕೂಡದು.

VIII. ಈ ಲೈಸೆನ್ಸು ಮೇರಿಗೆ ಬಿಕರಿ ಮಾಡಲ್ಪಡುವ ಪರೋಟಸ್ತು ಪರಾಯಿದೇಶದ ಸಾರಾಯಿ ಯಾ ಉಕ್ಕಿದ ಸಾರಾಯಿ ಯ ಖರೀದಿಗಾಗಿ ನಗದು ಹಣ ತೆಗದುಕೊಳ್ಳತಕ್ಕದ್ದೇ ಹೊರ್ತು ಸಾಲವಾಗಿ ಕೊಡಕೂಡದು ಅಥವಾ ಸಾರಾಯಿಗಾಗಿ ಯಾವ ವಸ್ತು ವ ವನ್ನಾಗಲಿ ಅಡವಾನವಾಗಿಯಾಗಲಿ ಯಾ ಬದಲಿಯಾಗಿಯಾಗಲಿ ಇಟ್ಟುಕೊಳ್ಳಕೂಡದು.

IX. ಅಂಗಡಿಯನ್ನ ಪ್ರತಿದಿನವೂ ರಾತ್ರಿ 9 ಘಂಟೆಗೆ ಮುಚ್ಚಬೇಕು ಮತ್ತು ಪ್ರಾತಃಕಾಲ 6 ಘಂಟೆಗೆ ಮುಂಚಿಡವಾಗಿ ತೆರೆಯ ಕೂಡದು. ಆಂಗಡಿಯು ಪ್ರಾತಃಕಾಲ 8 ಘಂಟೆ ಲಾಗಾಯತು ರಾತ್ರಿ 9 ಘಂಟೆವರವಿಗೂ ತೆರದಿರತಕ್ಕದ್ದು.

X. ಅಸಿಸ್ಟೆಂಟ್ ಕಮ್ಮಿಷನರ ದರ್ಜೆಗೆ ಕಮ್ಮಿಯಿಲ್ಲದ ಯಾವ ಆಫಿಸರೇ ಆಗಲಿ ಅಥವಾ ಅಂಥಾ ಆಫಿಸರಿಂದ ಅಧಿಕಾರ ಹೊಂದಿ ದಂಥಾ ಯಾವ ಎಕ್ಸೈಜ್ ಆಫಿಸರೇ ಆಗಲಿ ಕೇಳಿದಾಗ ಲೈಸೆನ್ಸುದಾರನು ಬಿಕರಿ ಬ್ಯೆ ಕೊಶೋಷಾವ ಈ ಲೈಸೆನ್ಸು ಅನುಸರಿಸಿ

ತರಿಸಿದಂಥಾ ಪರಾಯಿ ದೇಕದ ಸ್ಪಿರಿಟ್ ಸಾರಾಯಿ ಯಾ ಉಕ್ತದ ಸಾರಾಯಿ ಇವುಗಳ ಅಸಲ್ ಇನ್‌ವಾಯಿಸ್ ಲೆಕ್ಕವನ್ನು ಹಾಜರ್ಮಾಡಲಿಕ್ಕೆ ಬದ್ಧನಾಗಿರತಕ್ಕದ್ದು.

XI. ಈ ಲೈಸೆನ್ಸುದಾರನು ತನ್ನ ಕೆಲಸವನ್ನು ನಿಲ್ಲಿಸಿ ಬಿಡಬೇಕಾದಾಗ _____ ರೂಲ್ಸು ಅನುಸರಿಸಿ ಪರಾಯಿ ದೇಕದ ಸ್ಪಿರಿಟ್ ಸಾರಾಯಿ ಯಾ ಪರಾಯಿ ದೇಕದ ಉಕ್ತದ ಸಾರಾಯಿಯನ್ನು ಮಾರಲಿಕ್ಕಾಗಿ ಲೈಸೆನ್ಸು ಪಡೆದಂಥಾ ಇತರ ಲೈಸೆನ್ಸುದಾರನಿಗೆ ಸದರೀ ಸಾರಾಯಿಯನ್ನು ಮಾರಬಹುದು ಅಥವಾ ವರ್ಗ ಮಾಡಬಹುದು. ಹಾಗೆ ಮಾರಬೇಕಾದರೆ ಅಗಲೀ ಯಾ ವರ್ಗಮಾಡಬೇಕಾದರೆ ಅಗಲಿ ಡೆಪ್ಯುಟಿ ಕಮ್ಮಿಷನರವರ ಎಕ್ಸೈಜ್ ಇಲಾಖೆಯಿಂದ ರುಜು ಮಾಹರನ್ನು ಪ್ಯಾಸ್ಸುಕೇಟ್ ರಹದಾರಿ ಯನ್ನು ಮುಂಚಿತವಾಗಿ ಪಡಿಯದೇ ಮಾರಲೂ ಕೂಡದು ವರ್ಗ ಮಾಡಲೂಕೂಡದು ; ಖರೀದಿ ಮೂಲಕ ಯಾ ವರ್ಗವಾಗಿ ಪಡಕೊಂಡ ಲೈಸೆನ್ಸುದಾರನು ಹಾಗೆ ಪಡಕೊಂಡದ್ದಕ್ಕಾಗಿ ಸದರೀ ರಹದಾರಿಯ ಎರಡನೇ ಪ್ರತಿಯನ್ನು ದಸ್ತೈವಜಾಗಿ ತನ್ನ ಬಳಿ ಯಿಟ್ಟುಕೊಂಡಿದ್ದು ಎಕ್ಸೈಜ್ ಆಫಿಸರು ತನಿಖೆ ಬಗ್ಯೆ ಯವಾಗಲಾದರೂ ಕೇಳಿದಾಗ ಅದನ್ನು ತೋರಿಸತಕ್ಕದ್ದು. ಖರೀದಿಮಾಡಿದವನು ಮತ್ತು ಖರೀದಿಗೆ ತೆಗದುಕೊಂಡನು ಈ ಉಭಯತ್ರರೂ ಅಸಲ್ ರಹದಾರಿಗೆ ತಾರೀಖು ನಮೂದಿಸಿ ರುಜುಮಾಡಿ ಡೆಪ್ಯುಟಿ ಕಮ್ಮಿಷನರವರ ಎಕ್ಸೈಜ್ ಆಫಿಸಿಗೆ ವಾಪಸು ಕಳುಹಿಸತಕ್ಕದ್ದು.

XII. ಲೈಸೆನ್ಸುದಾರನು ಯಿಡುವ ಲೆಕ್ಕದಲ್ಲಿ ತಿಂಗಳು, ತಾರೀಖು, ಪರಾಯಿದೇಕದ ಸ್ಪಿರಿಟ್ ವ ಉಕ್ತದ ಸಾರಾಯಿಗಳ ತೇದಾದು, ಮತ್ತು ತರಹೆಗಳು, ಯಾವ ಮೂಲಕವಾಗಿ ಪಡದುಕೊಂಡದ್ದು, ಬಿಕರಿಯಾದ ತೇದಾದು ವ ಆದರ ಮೊಬಲಗು, ಮತ್ತು ರೋಜೀನಾ ಹಾಜರೀ ಸರಕು, ಯಿವುಗಳ ಸುಟಾ ವ ಕರಾರ್‌ವಾಕಾ ತಪಶೀಲ್ ನಮೂದಿಸತಕ್ಕದ್ದು; ಈ ಲೆಕ್ಕಗಳು ಯಾವಕಾಲದಲ್ಲಾಗಲಿ ಎಕ್ಸೈಜ್ ಇಲಾಖೆಯ ಆಫಿಸರ್‌ಗಳ ತನಖೆಗೆ ಒಳಪಟ್ಟಿರತಕ್ಕದ್ದು. ಈ ಲೆಕ್ಕದ ಗೋಷ್ವಾರೆಯನ್ನು ತನಿಖೆಯಿಂದ ಡೆಪ್ಯುಟಿ ಕಮ್ಮಿಷನರವರ ಆಫಿಸಿನ ಎಕ್ಸೈಜ್ ಇಲಾಖೆಗೆ ರವಾನಿಸತಕ್ಕ ಬಗ್ಯೆ ಮೊಕರರಾಗಿರುವ ಎಕ್ಸೈಜ್ ಆಫಿಸರ ಬಳಿಗೆ ತಿಂಗಳಿಗೊಂದಾವರ್ತಿ ಯರಡು ಪ್ರತಿಗಳು ರವಾನಿಸಲ್ಪಡತಕ್ಕದ್ದು.

XIII. ಈ ಲೈಸೆನ್ಸು ಕ್ರಯ, ದಾನ, ಭೋಗ್ಯ ಯಾ ಮತ್ಯಾವ ರೀತಿಯಿಂದಲಾಗಲಿ ವರ್ಗವಾಗತಕ್ಕದ್ದಲ್ಲವು, ಮತ್ತು ಯಿದರಲ್ಲಿ ನಮೂದಿರುವವರು ಹೊರ್ತು ಅನ್ಯಥಾ ಯಾರಿಗೇ ಆಗಲಿ ಈ ಲೈಸೆನ್ಸಿನ ಷರತ್ತುಗಳನುಸರಿಸಿ ನಡಿಯಲಿಕ್ಕೆ ಅಧಿಕಾರ ವಿರುವದಿಲ್ಲ.

XIV. ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿನಡೆದರೆ, ಲೈಸೆನ್ಸುದಾರ ಅಥವಾ ದುಕಾನದಾರನು ಎಕ್ಸೈಜ್ ಕಾನೂನಿನಲ್ಲಿ ವ ಅದಕ್ಕನುಸರಿಸಿ ಮಾಡೋಣಾದ ನಿಬಂಧನೆಗಳಲ್ಲಿ ವಿಧಿಸಿರುವ ದಂಡನೆಗಳಿಗೆಲ್ಲಾ ಗುರಿಯಾಗುವದಲ್ಲದೆ (1885ನೇ ಇಸವಿಯ ಮೈಸೂರು IIIನೇ ರೆಗ್ಯುಲೇಷನ್) ಯಂಟು 1881ನೇ ಇಸವಿ XXIIನೇ ಆಕ್ಟನ 13ನೇ ಸೆಕ್ಷನ್ ಮೇರಿಗೆ ಡೆಪ್ಯುಟಿ ಕಮ್ಮಿಷನರವರಿಗೆ ಯುಕ್ತತೋರಿದಂತೆ ಲೈಸೆನ್ಸು ಸಹ ರದ್ದಾಗಲಿಕ್ಕೆ ಗುರಿಯಾಗಿರತಕ್ಕದ್ದು.

XV. ಈ ಲೈಸೆನ್ಸು 18 ನೇ ಇಸವಿ ಮಾರ್ಚಿ 31ರ ವರಿವಿಗೆ ಜಾರೀಲಿರತಕ್ಕದ್ದು.

_____ ಡಿಸ್ಟ್ರಿಕ್ಟು

ಡೆಪ್ಯುಟಿ ಕಮ್ಮಿಷನರ್ ಆಫಿಸು
ತಾರೀಖು ನೇ

_____ ಡಿಸ್ಟ್ರಿಕ್ಟು

ಡೆಪ್ಯುಟಿ ಕಮ್ಮಿಷನರ್

ಈ ಕೆಳಗೆ ರುಜು ಮಾಡುವಂಥಾ _____ ಲ್ಲಿ
ವಾಸವಾಗಿರುವ _____ ನ ಮಗನಾದ
_____ ಯಬ ನಾನು
ಮೇಲ್ಕಂಡ ಲೈಸೆನ್ಸುದಾರನಾಗಿ, ನನಗಾಗಿಯು, ನನ್ನ ವಾರ್ಸದಾರ್‌ರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗ ಪಡೆದಂಥಾವರಿಗೋಸ್ಕರವೂ ಯಿದರ ದೆಸೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ವಿವರಿಸೋಣಾದ ಕರಾರುಗಳಿಗೂ ವ ಷರತ್ತುಗಳಿಗೂ ಪೂರ್ಣರುತ್ತೇನೆ.

_____ ತಿಂಗಳ _____ ನೇ ತಾರೀಖಿನಲ್ಲಿ _____
_____ ರವರ ಕಛೇರಿಯಲ್ಲಿ ನಮ್ಮಿಗಳ ರೂಬರು ರುಜು ವ ಮೊಹರನೊಡನೆ ಪೂರ್ಣಪ್ಪಿಸಲ್ಪಟ್ಟಿರುತ್ತೆ.

ಸಾಕ್ಷಿಗಳು
1 _____
2 _____
3. _____

ಲೈಸೆನ್ಸುದಾರ.

ಯಾರ ರೂಬರೂ ರುಜು ಮಾಡಲ್ಪಟ್ಟಿತೋ ಆ ಆಫಿಸರರ ರುಜು.

ಬೆಂಗಳೂರು ವ ಮೈಸೂರು ಪಹರೆಗಳ ಮ್ಯುನಿಸಿಪಲ್ ರೆಗ್ಯುಲೇಷನಿನ 58ನೇ ಸೆಕ್ಷನ್ ಅನುಸರಿಸಿ ರಿಜಿಸ್ಟರ್ ಮಾಡಿದಬಗ್ಯೆ ಸರಟಿಫಿಕೇಟು

ತಾರೀಖು ನೇ

ಪ್ರೆಸಿಡೆಂಟ್ (ಅಥವಾ ವೈಸ್ ಪ್ರೆಸಿಡೆಂಟ್)
ಮ್ಯುನಿಸಿಪಾಲಿಟಿ.

ತಾರೀಖು 21ನೇ ಮೇ 1889.

ನಂ. 48.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನ ಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ನ ತಾರೀಖಿನಲ್ಲೂ ಬಹಿರಂಗವಾದ ಹರಾಜಿ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚೆಡದರಖಾಸ್ತುದಾರರಿಗೆ ಪರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಬ್ಸ್ಕ್ರೈಬರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಜಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಖ್ತಾರೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಋಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಒಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಒಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮನ್ಸೂಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ, ಇರುವ ಗಲ್ಲತಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾ ಪಟ್ಟವಂತೆ ಎಣಿಸುವ ಜನಗಳು ಪರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಜ್ಞೆರ್ ಹುಕುಮಿಗೆ ಸದರೀ ಕಯವು ಒಳಪಟ್ಟು ಯಿರುತ್ತೆ.

| ಡಿಸ್ಟ್ರಿಕ್ಟ್. ತಾಲ್ಲೂಕು. ಹೋಬ್ಳಿ. | ಗ್ರಾಮ. | ಜೋಡೀದಾರರ ಹೆಸರು. | ಅಂದಾಜಾ ಬೀಜವರಿ. | ಅಂದಾಜಾ ಹುಟ್ಟುವಳಿ ಯಾ ಬೇರಿಜು. | ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್. | ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾತ್. | ಹರಾಜು ತಾರೀಖು ವಗೈರೆ. |
|---|---|---|---|---|---|---|---|
| ಕೋಲಾರ. ಬವಿಂಗನಕೆರೆ. | ದಾಸರಹೊಸಹಳ್ಳಿ. | ವಜಮು ತ್ಮನಹಳ್ಳಿ. | ಮೆ|| ಎಫ್. ಹಬ್ಬಿಯು ಸ್ಮಿತ್ (ಖರೀದಿಗೆ ಪಡೆದವರು) | ಖಂ. ಕೊ. ಪ. 72 0 5¾ | ರೂ. ಆ. ಪೈ. 458 9 1 | ರೂ. ಆ. ಪೈ. 258 0 1 | ರೂ. ಆ. ಪೈ 1748 2 4 ಮತ್ತು ಬಡ್ಡಿ | ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರೂ ಮುಂದಿನ ತಿಂಗಳು 26ನೇ ತಾರೀಖಿನಲ್ಲಿ |

ಪರಾ.—ಜೋಡೀದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ, ದೇಣಿಗೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಪರಾಜು ವಳಪಟ್ಟಿರುವದಿಲ್ಲ.

ತಾರೀಖು 27ನೇ ಮೇ 1889.

ನಂ. 52.—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟ್ ಮಂಡ್ಯ ತಾಲ್ಲೂಕಿನ ಗ್ರಾಮಗಳು ಮಂದು ಮಾಗಣಿಯಿಂದ ಮತ್ತೊಂದು ಮಾಗಣಿಗೆ ವರ್ಗಮಾಡಲ್ಪಡತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತೆ:—

| ನಂ. | ಗ್ರಾಮ. | ಯಾವ ಮಾಗಣಿಯಿಂದ. | ಯಾವ ಮಾಗಣಿಗೆ. |
|---|---|---|---|
| 1 | ಹುಲಗನಹಳ್ಳಿ | ಮದ್ದೂರಿಂದ | ಆಲಗೂರಿಗೆ |
| 2 | ಅಗರಲಿಂಗನಹಳ್ಳಿ | ತಿಪ್ಪೂರಿಂದ | ಮದ್ದೂರಿಗೆ |

ನಂ. 53.—ಇದರಡಿ ಕಂಡ, ಮೈಸೂರು ಡಿಸ್ಟ್ರಿಕ್ಟ್ ಮಂಡ್ಯ ತಾಲ್ಲೂಕಿನ ಗ್ರಾಮಗಳ ಶೇರುವಿಕೆಯು ಹುಕುಂ ಮಾಡಲ್ಪಟ್ಟಿರುತ್ತೆ:—

| ಮಾಗಣಿ. | ನಂಬರ್. | ವಳಕೊಳಲ್ಪಡಬೇಕಾದ ಗ್ರಾಮಗಳು. | ನಂ. | ಮೂರನೇ ಕಲಮಿನಲ್ಲಿ ಕಂಡ ಗ್ರಾಮಗಳೊಂದಿಗೆ ಶೇರಿಸಲ್ಪಡಬೇಕಾದ ಗ್ರಾಮಗಳು. |
|---|---|---|---|---|
| 1 | 2 | 3 | 4 | 5 |
| ದುದ್ದ | 1 | ಗಂಟಿಗವಾಡನಹಳ್ಳಿ | .. 1 | ಚಿಕ್ಕಗವಡನಹಳ್ಳಿ |
| ಮತ್ತಿಕೆರೆ | 2 | ಜಾವನಹಳ್ಳಿ | .. 1 | ಮರಗವಡನಕೊಪ್ಪಲು |
| ಏಸರಾಳ್ | 3 | ತಿರುಮಲಾಪುರ | .. 1 | ಈರುಬರಹಳ್ಳಿ |
| | 4 | ಗುತ್ತಿಗನಹಳ್ಳಿ | ... 1 | ಸುಂಡಲಗೆರೆ |
| ಮದ್ದೂರು | 5 | ಗೊರವನಹಳ್ಳಿ | ... 1 | ತಿಪ್ಪಸಂದ್ರ |
| | 6 | ಜಾವನಹಳ್ಳಿ | .. 1 | ಉಪ್ಪಾರದೊಡ್ಡಿ |
| ತಿಪ್ಪೂರು | 7 | ದಡಿಗ | .. 1 | ಹೊಸೂರು |
| | 8 | ಹೊನ್ನಲಗೆರೆ | .. 1 | ಚಂಡಹಳ್ಳಿ |

ತಾರೀಖು 18ನೇ ಮೇ 1889.

ನಂ. 39.—1887ನೇ ಇಸವಿ ಡಿಸಂಬರ್ 17ನೇ ಮತ್ತು ಂವಳ್ಳ ಮೈಸೂರು ಗವರ್ಮೆಂಟ್ ಗೆಜೆಟ್ಟಿನಲ್ಲಿ ಘಾಯಿಷ್ಮಾಡಲ್ಪಟ್ಟ 1887ನೇ ಇಸವಿ ಡಿಸಂಬರ್ 14ನೇ ಮತ್ತು ಂ 155ನೇ ನಂಬರ್ ವಳ್ಳ ಇಸ್ತಿಹಾರ್‌ನಾಮೆಯಲ್ಲಿ "ಮನ್ನಾ ಜಾತಿ ಮರಗಳು" ಕುರಿತ 11ನೇ ರೂಲನ್ನು ಬದಲಾಯಿಸಿ ಯಿದರಿಂದ ಹುಕುಂ ಮಾಡುವದೇನಂದರೆ, ಕಾಫಿ ಎಸ್ಟೇಟುಗಳು ಇರತಕ್ಕ ತಾಲ್ಲೂಕಿನ ಅಮಲ್‌ದಾರರು ಸದರೀ ಇಸ್ತಿಹಾರ್‌ನಾಮೆಯ ಷರತ್ತುಗಳನುಸರಿಸಿ ಮಾಫಿ ರಹದಾರಿ ಪಡೆದಿರುವವರ ವಾಸ್ತವ್ಯವಾಗಿ ಸ್ವಂತ ಉಪಯೋಗದ ಬ್ಯೆ ಮನ್ನಾಜಾತಿ ಮರಗಳನ್ನು ಅಂಫಾ ಕಾಫಿ ಎಸ್ಟೇಟಿನ ಆಚೆಗೆ ಸಾಗಿಸುವ ಬಗ್ಯಾಗಿ ಮಾಫಿ ರಹದಾರಿಗಳನ್ನು ಕೊಡಬಹುದು.

ತಾರೀಖು 30ನೇ ಮೇ 1889.

ಕ್ಯಾಂಪ್ ನಂಬರ್ 116.—ಚಿತ್ರದುರ್ಗದ ಆಕ್ಟಿಂಗ್ ಡೆಪ್ಯುಟಿ ಕಮ್ಮಿಷನರಾದ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರು ಮತ್ತು ಕೋಲಾರದ ಆಕ್ಟಿಂಗ್ ಡೆಪ್ಯುಟಿ ಕಮ್ಮಿಷನರಾದ ಮೆ॥ ಅಬ್ದುಲ್‌ರಹಿಮ್ಮಾಯವರು, 1889ನೇ ಇಸವಿ ಏಪ್ರಿಲ್ 1ನೇ ಮತ್ತು ಂ ಲಾಗಾಯತು 4ನೇ ಕ್ಲಾಸ್ ಡೆಪ್ಯುಟಿ ಕಮ್ಮಿಷನರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ; ಮತ್ತು ಖಾಲೀ ಇರುವ ಕೆಲಸಗಳನ್ನು ಭರ್ತಿ ಮಾಡುವ ಬ್ಯೆ ಇದರಡಿ ಕಂಡ ಅಸಿಸ್ಟೆಂಟ್ ಕಮ್ಮಿಷನರುಗಳ ಬಡ್ತಿಯು ಅವೇ ತಾರೀಖು ಲಾಗಾಯತು ಹುಕುಂ ಮಾಡಲ್ಪಟ್ಟಿರುತ್ತೆ:—

2ನೇ ಕ್ಲಾಸಿನಿಂದ 1ನೇ ಕ್ಲಾಸಿಗೆ.

ಮೆ॥ ಬಿ. ತಿರುಮಲಾಚಾರ್ರು; ಮೆ॥ ಡಿ. ನಾಮಕಲ್ ರಾಯರು.

3ನೇ ಕ್ಲಾಸಿನಿಂದ 2ನೇ ಕ್ಲಾಸಿಗೆ.

ಮೆ॥ ಬಿ. ಜಿ. ಕೃಷ್ಣಯ್ಯಂಗಾರ್ರು.

ಮೆ॥ ಟಿ. ರಾಘವೇಂದ್ರರಾಯರು.

4ನೇ ಕ್ಲಾಸಿನಿಂದ 3ನೇ ಕ್ಲಾಸಿಗೆ.

* ಮೆ॥ ದಳವಾಯಿ ದೇವರಾಜ ಅರಸಿನವರು.

* ಮೆ॥ ಕೆ. ರಾಮಚಂದ್ರರಾಯರು.

ಮೆ॥ ಯಂ. ನಾರಾಯಣರಾಯರು.

ನಂ. 99.—ಗುಂಡ್ಲುಪೇಟೆ ತಾಲ್ಲೂಕು ಅಮಲ್‌ದಾರ್ ಖಾದರ್ ಅಲ್ಲೀಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ಡಿಸ್ಟ್ರಿಕ್ಟ್ ಆಫಿಸ್ ರೆವಿನ್ಯೂ ಶಿರಸ್ತೇದಾರ್ ಏ. ಸುಬ್ಬಯ್ಯರವರಿಗೆ, ಖಾದರಲ್ಲಿಯವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಗುಂಡ್ಲುಪೇಟೆ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

* ವಿಧಿನೋಣಾದ ಪರೀಕ್ಷೆಯಲ್ಲಿ ತೇರ್ಗಡೆಯಾಗುವದಕ್ಕೆ ಬಳಪಟ್ಟು.

ಕ್ಯಾಂಪ್ ನಂಬರ್ 105.—ಕ್ಲೋಸ್‌ಪೇಟೆ ತಾಲ್ಲೂಕು ಅಮಲ್‌ದಾರ್ ಕೆ. ಶ್ರೀನಿವಾಸರಾಯರಿಗೆ, 1889ನೇ ಇಸವಿ ಜುಲೈ 10ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 13 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಚನ್ನಪಟ್ಟಣ ಸಬ್ ಡಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ ನರಶಿಂಹಮೂರ್ತಿರಾಯರು, ಶ್ರೀನಿವಾಸರಾಯರು ರಜಾವ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಅವರ ಕೆಲಸಗಳೊಂದಿಗೆ ಕ್ಲೋಸ್‌ಪೇಟೆ ತಾಲ್ಲೂಕು ಚಾರ್ಜನ್ನು ದಹಿಸಿರತಕ್ಕದ್ದು.

ತಾರೀಖು 31ನೇ ಮೇ 1889.

ನಂ. 55.—1889ನೇ ಇಸವಿ ಮೇ 11ನೇ ಮತ್ತು 38ನೇ ನಂಬರ್ ಇಸ್ತಿಹಾರ್‌ನಾಮೆಯ 2ನೇ ಕಲನುನ್ನು ರದ್ದುಮಾಡಿ, ದಿವಾನರವರ ಆಫಿಸ್ ಕ್ಲರ್ಕ್ ಟಿ. ಬಾವಾರಾವ್ ಬಿ. ಏ. ಯವರಿಗೆ, ಕಾಯಮು ಅಮಲ್‌ದಾರರಾದ ವೆಂಕಟರಮಣಯ್ಯನವರು ರಜಾದ ಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹೊಸಕೋಟೆ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ತಾರೀಖು 3ನೇ ಜುಲೈ 1889.

ನಂ. 56.—ದಿವಾನರವರ ಆಫಿಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಎಸ್. ವೈದ್ಯನಾಥ ಅಯ್ಯರವರಿಗೆ, 1889ನೇ ಇಸವಿ ಮಾರ್ಚಿ 26ನೇ ಮತ್ತು ಂ 2209ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಬಗರ್ ತಲಬ್ ರಜಾವು, ಇನ್ನೂ ಮೂರು ತಿಂಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ನಂ. 57.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ, ಸಿಡ್ಲಘಟ್ಟದ ತಾಲ್ಲೂಕು ಶಿರಸ್ತೇದಾರ್ ತಿರುಮಲಾಚಾರ್ರಿಗೆ, ಅವರು ಸದರೀ ತಾಲ್ಲೂಕು ಚಾರ್ಜ್ ವಹಿಸಿರುವ ಕಾಲದಲ್ಲಿ ಚಲಾಯಿಸತಕ್ಕ ಬಗ್ಯಾಗಿ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ನಂ. 58.—ಕೋಲಾರ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ ವಿ. ಕೆ. ಸ್ವಾಮಿನಾಥಯ್ಯನವರಿಗೆ, 1889ನೇ ಇಸವಿ ಏಪ್ರಿಲ್ 26ನೇ ಮತ್ತು ಮಿನ 24ನೇ ನಂಬರ್ ಇಸ್ತಿಹಾರಿನಲ್ಲಿ ಕೊಡೋಣಾಗಿದ್ದ ಯರಮು ತಿಂಗಳ ಪ್ರಿವಿಲೇಜ್ ರಜಾವನ್ನ ಇದರ ದೆಸೆಯಿಂದ ರದ್ದುಪಡಿಸಿರುತ್ತೆ.

ಕ್ಯಾಂಪ್ ನಂ. 109.—ಇದರಡಿ ಕಂಡ ಅಸಿಸ್ಟೆಂಟ್ ಕಮ್ಮಿಷನರುಗಳ ವರ್ಗಾವರ್ಗಿಯನ್ನ ಮಂಜೂರ್ಮಾಡೋಣಾಗಿರುತ್ತದೆ:—

1. ಮೆ|| ಜಿ. ರಘುನಾಥರಾಯರಿಗೆ, ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಬೆಂಗಳೂರು ಡಿಸ್ಟ್ರಿಕ್ಟಿಗೆ—ಇವರು ರಜಾ ಪೂರೈಸಿದ ಕೂಡ್ಲೆ ದಾಖಲಾಗತಕ್ಕದ್ದು.
2. ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ನಾವುಕಲ್ ವೆಂಕಟರಾಯರು, ಬೆಂಗಳೂರು ಡಿಸ್ಟ್ರಿಕ್ಟಿನಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ—ಇವರು ಚಾರ್ಜ್ ವೈಪ್ಪಿಸಿದ ತರುವಾಯ ದಾಖಲಾಗತಕ್ಕದ್ದು.
3. ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ವೀ. ಎಸ್. ಗೋಪಾಲಯ್ಯಂಗಾರ್ರು ಪೋಲೀಸ್ ಚಾರ್ಜ್ ವಹಿಸುವ ವೃದ್ಧಿಕ್ಷಯ ಹಾಸನ ಡಿಸ್ಟ್ರಿಕ್ಟಿನಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ.
4. ಮೆ|| ಎಸ್. ವೈದ್ಯನಾಥಯ್ಯರ್‌ಯವರು, ರಜಾದ ಮೇಲೆ ಇರುವ ಪರ್ಯಂತ ಯಾ ಮತ್ತೊಂದು ಹುಕುಂ ಕೊಡುವ ವರಿವಿಗೂ, ಮೆ|| ಎಸ್. ಕೃಷ್ಣರಾಯರು ದಿವಾನರವರ ಆಫಿಸಿನಲ್ಲಿ ಕೆಲಸ ನೋಡುತ್ತಾ ಇರತಕ್ಕದ್ದು.
5. (ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟಿಂಡೆಂಟ್) ಮೆ|| ಹೆಚ್. ರಾಮಾನುಜಯ್ಯಂಗಾರ್ರು 4ನೇ ಕ್ಲಾಸ್ ಅಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರಾಗಿ ಟ್ರಿಜರೀ ಚಾರ್ಜ್ ವಹಿಸುವ ವೃದ್ಧಿಕ್ಷಯಕೋಲಾರ ಡಿಸ್ಟ್ರಿಕ್ಟಿಗೆ ವರ್ಗವಾಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 125.—ಬೆಂಗಳೂರು ಸಬ್ ಜಡ್ಜ್ ಮೆ|| ಸಿ. ಕೃಸ್. ಯವರು ಇತರ ಕೆಲಸದ ಮೇಲೆ ಇರುವ ವರಿವಿಗೂ, ಇದರಡಿ ಕಂಡ ಹಂಗಾಮಿ ಬಡ್ತಿಗಳು ವ ನೊಕರರಾತಿಗಳು ಮಂಜೂರ್ಮಾಡಲ್ಪಟ್ಟಿರುತ್ತವೆ:—ಯಾವವೆಂದರೆ.—

ಬಡ್ತಿಗಳು.

2ನೇ ಕ್ಲಾಸ್ ಸಬ್ ಜಡ್ಜ್ ಮೆ|| ಸಿ. ಶ್ರೀನಿವಾಸಯ್ಯಂಗಾರ್ರು, 1ನೇ ಕ್ಲಾಸ್ ಸಬಾರ್ಡಿನೇಟ್ ಜಡ್ಜರಾಗಿರತಕ್ಕದ್ದು.
3ನೇ ಕ್ಲಾಸ್ ಸಬ್ ಜಡ್ಜ್ ಮೆ|| ಎಲ್. ಅನಂತಸ್ವಾಮಿರಾಯರು, 2ನೇ ಕ್ಲಾಸ್ ಸಬ್ ಜಡ್ಜರಾಗಿರತಕ್ಕದ್ದು.

ನೊಕರರಾತಿಗಳು.

ಚೀಫ್ ಕೋರ್ಟಿನಲ್ಲಿ ಸಬಾರ್ಡಿನೇಟ್ ಜಡ್ಜ್ ವ ರಿಜಿಸ್ಟ್ರಾರ್ ಮೆ|| ಎಲ್. ಅನಂತಸ್ವಾಮಿರಾಯರು, ಬೆಂಗಳೂರು ಸಬಾರ್ಡಿನೇಟ್ ಜಡ್ಜರಾಗಿರತಕ್ಕದ್ದು.

ಫಸ್ಟ್ ಕ್ಲಾಸ್ ಮುನಸಿಫ್ ಮೆ|| ಎಸ್. ಆರ್. ಸುಬ್ರಾಯರ್‌ಯವರು, 3ನೇ ಕ್ಲಾಸ್ ಸಬಾರ್ಡಿನೇಟ್ ಜಡ್ಜರಾಗಿಯೂ ವ ಚೀಫ್ ಕೋರ್ಟಿನ ರಿಜಿಸ್ಟ್ರಾರಾಗಿರತಕ್ಕದ್ದು.

ಅಡ್ವೋಕೇಟ್ ಮೆ|| ಎಸ್. ನಾರಾಯಣರಾವುರು, 3ನೇ ಕ್ಲಾಸ್ ಮುನಸಿಫರಾಗಿಮೊಕರರ್ರಾಡಲ್ಪಟ್ಟು ಕೋಲಾರವ ಮುನಸಿಫರಾಗಿರತಕ್ಕದ್ದು.

ಇದರಡಿ ಕಂಡ ಮುನಸಿಫರ ವರ್ಗಾವರ್ಗಿಯುಮಂಜೂರ್ಮಾಡಲ್ಪಟ್ಟಿರುತ್ತೆ:—

ಎಸ್. ಎಸ್. ರಾಮಾನುಜಯ್ಯಂಗಾರ್ರವರು, ನೆಲಮಂಗಲದಿಂದ ಬೆಂಗಳೂರಿಗೆ ವರ್ಗ.
ವೀ. ವೆಂಕಟರಾಯರು, ಕೋಲಾರದಿಂದ ನೆಲಮಂಗಲಕ್ಕೆ ವರ್ಗ.

ತಾರೀಖು 4ನೇ ಜೂ೯ 1889.

ನಂ. 59.—ಹಾರ್ಸ ಡಿಸ್ಪೆನ್ಸರಿ ಜನರಲ್ ಅಸಿಸ್ಟೆಂಟ್ ಕಮ್ಮಿಷನರ ಮೆ|| ಬಿ. ಜಿ. ಕೃಷ್ಣಯ್ಯಂಗಾರ್ರಿಗೆ, ಸ೯ 1889ನೇ ಇಸವಿ ಜೂ೯ ತಾರೀಖು 10ರ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 17 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 5ನೇ ಜೂ೯ 1889.

ನಂ. 60.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಲಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೊಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಲಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಶುರುವಾಗಿ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಕೇರೆಕೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಕೇಪಡಾ 25 ರೂಪಾಯಿ ಡಿಪಾಜಿಟಿ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬಿದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತನ್ನ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂಬ ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತೂಫಾ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲನ್ನು ಪೂರ್ತಿಯಾಗಿ ಪಾವತಿ ಮಾಡಿ ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಸರವರಿಂದ ರುಜು ಮೋಹರ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಶುರುವ ಗಲ್ಲತ್ತಾಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು

9. ಪರಂತು ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

| ಡಿಸ್ಟ್ರಿಕ್ಟು. | ತಾಲ್ಲೂಕು. | ಹೋಬಳಿ. | ಗ್ರಾಮ. | ಜೋಡೀದಾರರ ಹೆಸರು. | ಅಂದಾಜಾ ಬೀಜವರೀ. | ಅಂದಾಜು ಹುರಕಾರಕ್ಕೆ ಕೊಟ್ಟುವಳೀ ಮಾಡಬೇಕಾದ ಕ್ವಿಟೆರೆಂಟ್. | ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್. | ಯಾವ ಬಾಕೀಗ್ಕೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಆಂಥಾ ಸರಕಾರದ ಕಂದಾಯದ ಬಾಕೀ. | ಹರಾಜು ತಾರೀಖು ಮೈರೇ. |
|---|---|---|---|---|---|---|---|---|---|
| ಮೈಸೂರು. | ನಂಜನಗೂಡು. | ತಾಯೂರು. | ಜೋಡಿ ಯಿಗ್ಗಲಿ. | 1. ವರದರಾಜಸ್ವಾಮಿ ದೇವರು 2. ತ್ರಿಪೇಶ್ವರಸ್ವಾಮಿ ದೇವರು ಮತ್ತು ಯಿತರ 23 ಜನ. | ಖಂ. ಕೂ. ಪ. 0 0 0 | ರೂ. ಆ. ಪೈ. 573 0 6 | ರೂ. ಆ. ಪೈ. 527 0 0 | ರೂ. ಆ. ಪೈ. 1068 9 0 ಮತ್ತು ಬಡಿ | ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರೂ ಮುಂದಿನ ತಿಂಗಳು 10ನೇ ತಾರೀಖಿನಲ್ಲಿ. |

ಪರಾ.—ಜೋಡೀದಾದಮಗಳೆಂಬಲಾಗಲಿ, ಬಾಧ್ಯತೆಯು ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ, ಉಂಟುಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ, ದೇವಗ್ರಾಮಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ

ಬಿಎೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟರಿ.